ಸೀತಾ ಬ್ಯಾಂಕ್
SEETHA BANK

RBI Lic. No: UBD/KAN/1564P

# ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ.

# SRI SEETHARAGHAVA SOUHARDA SAHAKARA BANK NIYAMITHA

ANNUAL REPORT

27ನೇ

ವಾರ್ಷಿಕ ವರದಿ

2024-2025

ದಿನಾಂಕ : 31–07–2025, ಗುರುವಾರ

ಸ್ಥಳ : ಶ್ರೀ ಗಣೇಶ ಸದನ, ಹೊಸದುರ್ಗ



ನಿಮ್ಮ ನಂಬಿಕೆಯೇ...

ನಮ್ಮ ವಿಶ್ವಾಸ...



## ಶ್ರೀ ಹಂಜಿ ಶಿವಸ್ವಾಮಿ

### ಅಧ್ಯಕ್ಷರು

| | | |
|---|---|---|
| ಅಧ್ಯಕ್ಷರು | : | ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ಗಣೇಶ ಸದನ ಟ್ರಸ್ಟ್ (ರಿ.), ಹೊಸದುರ್ಗ |
| ಗೌರವ ಅಧ್ಯಕ್ಷರು | : | ವರ್ತಕರ ಸಂಘ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ.), ಹೊಸದುರ್ಗ |
| ಅಧ್ಯಕ್ಷರು | : | ಶ್ರೀ ವಿನಾಯಕ ಸೇವಾ ಸಮಿತಿ (ರಿ), ಹೊಸದುರ್ಗ |

# 27ನೇ ಸರ್ವ ಸದಸ್ಯರ ಮಹಾಸಭೆಯ ನೋಟೀಸ್

ಮಾನ್ಯ ಸದಸ್ಯರೇ,

2024–25 ನೇ ಸಾಲಿನ ಬ್ಯಾಂಕಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ:31–07–2025 ನೇ ಗುರುವಾರ ಬೆಳಿಗ್ಗೆ 10.30 ಗಂಟೆಗೆ ಸರಿಯಾಗಿ ಬ್ಯಾಂಕಿನ ಅಧ್ಯಕ್ಷರಾದ ಶ್ರೀಯುತ ಹಂಜಿ ಶಿವಸ್ವಾಮಿಯವರ ಘನ ಅಧ್ಯಕ್ಷತೆಯಲ್ಲಿ ನಗರದ ಬಸ್ ನಿಲ್ದಾಣದ ಬಳಿಯಿರುವ **"ಶ್ರೀ ಗಣೇಶ ಸದನ"** ಸಭಾಂಗಣದಲ್ಲಿ ಕರೆಯಲಾಗಿದೆ.

ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸಭೆಯನ್ನು ಯಶಸ್ವಿಗೊಳಿಸಲು ವಿನಂತಿಸುತ್ತೇವೆ.

## ಸಭೆಯಲ್ಲಿ ಚರ್ಚಿಸುವ ವಿಷಯಗಳು

1. ಪ್ರಾರ್ಥನೆ ಹಾಗೂ ಸ್ವಾಗತ
2. 27ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿ ದಾಖಲು ಮಾಡುವುದು.
3. 2024–25ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ.
4. ಹಿಂದಿನ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.
5. ಕಳೆದ ಸಾಲಿನಲ್ಲಿ ಸೇರ್ಪಡೆಗೊಂಡ ಸದಸ್ಯರು ಹಾಗೂ ಸದಸ್ಯತ್ವದಿಂದ ವಿಮುಕ್ತಿಗೊಳಿಸಿದ ಸದಸ್ಯರ ವರದಿಯನ್ನು ಓದಿ ಒಪ್ಪಿ ಅಂಗೀಕರಿಸುವುದು.
6. 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಪಾಲನಾ ವರದಿಯ ನಡವಳಿಕೆಗಳನ್ನು ಓದಿ ಒಪ್ಪಿ ಅಂಗೀಕರಿಸುವುದು.
7. 2024–25ನೇ ಸಾಲಿನ ಲಾಭ ಹಂಚಿಕೆ ಅನುಮೋದಿಸುವುದು.
8. ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಜ್ಜೆಟ್) ಗಿಂತಲು ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಅನುಮೋದಿಸುವುದು.
9. 2025–26ನೇ ಸಾಲಿನ ಅಂದಾಜು ಆಯ–ವ್ಯಯ (ಬಜ್ಜೆಟ್)ವನ್ನು ಮಂಜೂರು ಮಾಡುವುದು.
10. 2025–26ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸುವುದು.
11. 2025–26ನೇ ಸಾಲಿಗೆ ಶಾಸನಬದ್ಧ ಲೆಕ್ಕಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ: 23–4–2025 ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ: 06ರ ಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸುವ ವಿಚಾರ.
12. ವಿವಿಧ ಕಾರಣಗಳಿಂದ ತೆರವುಗೊಂಡಿದ್ದ ಬ್ಯಾಂಕಿನ ನಿರ್ದೇಶಕರ ಸ್ಥಾನಕ್ಕೆ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನಗಳ ಅನ್ವಯ ಕೋ–ಆಪ್ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವುದು.
13. ಬ್ಯಾಂಕಿನಲ್ಲಿ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ದಿನಾಂಕ:26–11–2024ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ 13ರ ಅನ್ವಯ ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮದ ಪ್ರಕಾರ ಬ್ಯಾಂಕಿನ ಸೇವೆಯಿಂದ ವಜಾಗೊಳಿಸಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.
14. ಬ್ಯಾಂಕಿನ ಭದ್ರಾವತಿ ಶಾಖೆಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯು ದಿನಾಂಕ:15–11–2023ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು ದಿನಾಂಕ:24–11–2023ರಂದು ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–11ರ ಅನ್ವಯ ರಾಜೀನಾಮೆ ಅಂಗೀಕರಿಸಿದ್ದು ಸದರಿಯವರಿಗೆ ಬ್ಯಾಂಕಿನ ವತಿಯಿಂದ ನೀಡುವ ಕ್ಲೈಮ್ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.
15. ದಿನಾಂಕ:23–04–2025 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ-16 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸುವುದು.
16. ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಂಗಾಮಿ ನೌಕರನನ್ನು ದಿನಾಂಕ:28–03–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–19(1)ರ ಅನ್ವಯ ಖಾಯಂ ಸಿಬ್ಬಂದಿಯಾಗಿ ನೇಮಕ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.
17. ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸುವ ವಿಚಾರ.
18. ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯಿದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.
19. ದಿನಾಂಕ;25–07–2024ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ತೀರ್ಮಾನ ಸಂಖ್ಯೆ–19(1)ರ ಅನ್ವಯ ಸಾಲ ಸಂಗ್ರಹಣೆ ಮತ್ತು ಸಾಲ ವಸೂಲಾತಿ ನಿಯಯವನ್ನು ರಚಿಸಿಕೊಂಡಿದ್ದರ ಅನ್ವಯ ದಿನಾಂಕ:23–04–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ-10ರ ಅನ್ವಯ ಕ್ರಮ ಕೈಗೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.
20. ದಿನಾಂಕ:27–07–2023 ಹಾಗೂ 25–07–2024 ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭಾ ತೀರ್ಮಾನಗಳ ಅನ್ವಯ ಹೆಚ್ಚುವರಿ ಷೇರು ಧನ ತೊಡಗಿಸದೇ ಇರುವ ಸದಸ್ಯರುಗಳ ಬಗ್ಗೆ ದಿನಾಂಕ:27–06–2025 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ 13ರ ಅನ್ವಯ ಕ್ರಮ ಕೈಗೊಳ್ಳಲು ನಿರ್ಣಯಿಸಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.
21. ದಿನಾಂಕ:23–04–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–23(1)ರ ಅನ್ವಯ ಬ್ಯಾಂಕಿನಲ್ಲಿ ಹಾಲಿ ಹೊಂದಿರುವ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL (AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಲು ಕೈಗೊಂಡಿರುವ ನಿರ್ಣಯವನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.
22. ಬ್ಯಾಂಕಿನಲ್ಲಿ ಹಾಲಿ ಹೊಂದಿರುವ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL (AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಲು ಆಗುವ ಖರ್ಚು ವೆಚ್ಚಗಳಿಗೆ ಅನುಮೋದನೆ ನೀಡುವ ವಿಚಾರ.
23. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.

**ಕಾರ್ಯಕಾರಿ ಮಂಡಳಿ ಆದೇಶದ ಮೇರೆಗೆ**

ದಿನಾಂಕ : 27.06.2025

**(ಎನ್. ಮಂಜುನಾಥ)**
**ಪ್ರಧಾನ ವ್ಯವಸ್ಥಾಪಕರು, ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ**

**ಸೂಚನೆ:** ಮಹಾಸಭೆಯಲ್ಲಿ ಸದಸ್ಯರು ಚರ್ಚಿಸಬೇಕಾದ ವಿಷಯಗಳ ಬಗ್ಗೆ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರಲ್ಲಿ ಐದು(05) ದಿನಗಳ ಮುಂಚಿತವಾಗಿ ಲಿಖಿತವಾಗಿ ನೀಡಬಹುದು. ಅಂತಹ ವಿಷಯಗಳಿಗೆ ಅಧ್ಯಕ್ಷರ ಅನುಮತಿ ಮೇರೆಗೆ ಚರ್ಚಿಸಲು ಅವಕಾಶ ನೀಡಲಾಗುವುದು. ಸುಸ್ತಿದಾರರಲ್ಲದ ಸದಸ್ಯರುಗಳಿಗೆ ಮಾತ್ರ ಅವಕಾಶವಿರುತ್ತದೆ.

## 27ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯ ತಿಳುವಳಿಕೆ ಪತ್ರ

**1. ಪ್ರಾರ್ಥನೆ ಹಾಗೂ ಸ್ವಾಗತ**

ಟಿಪ್ಪಣಿ: ಬ್ಯಾಂಕಿನ ಸಿಬ್ಬಂದಿಯವರಿಂದ ಪ್ರಾರ್ಥನೆ ಹಾಗೂ ಬ್ಯಾಂಕಿನ ಉಪಾಧ್ಯಕ್ಷರಾದ ಶ್ರೀ ಡಿ.ಆದಿರಾಜಯ್ಯವರಿಂದ ಸ್ವಾಗತ.

**2. 27ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿ ದಾಖಲು ಮಾಡುವುದು.**

ಟಿಪ್ಪಣಿ: 27ನೇ ಸಾಮಾನ್ಯ ಸಭೆಯ ನೋಟೀಸ್‌ನ್ನು ಓದಿದ ನಂತರ ದಾಖಲು ಮಾಡಬಹುದು.

**3. 2024–25ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚನೆ.**

ಟಿಪ್ಪಣಿ: 2024–25ನೇ ಸಾಲಿನಲ್ಲಿ ಮರಣ ಹೊಂದಿರುವ ಸದಸ್ಯರುಗಳ ಗೌರವಾರ್ಥ ಸಂತಾಪ ಸೂಚಿಸುವುದು.

**4. ಹಿಂದಿನ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.**

ಟಿಪ್ಪಣಿ: 25–07–2024ರಂದು ನಡೆದ ಮಹಾಸಭೆಯ ನಡವಳಿಕೆಗಳನ್ನು ಓದಿ ಒಪ್ಪಿ ದೃಢೀಕರಿಸುವುದು.

**5. ಕಳೆದ ಸಾಲಿನಲ್ಲಿ ಸೇರ್ಪಡೆಗೊಂಡ ಸದಸ್ಯರು ಹಾಗೂ ಸದಸ್ಯತ್ವದಿಂದ ವಿಮುಕ್ತಿ ಗೊಳಿಸಿದ ಸದಸ್ಯರ ವರದಿಯನ್ನು ಓದಿ ಒಪ್ಪಿ ಅಂಗೀಕರಿಸುವುದು.**

ಟಿಪ್ಪಣಿ: ವರ್ಷದ ಆರಂಭದಲ್ಲಿ ಬ್ಯಾಂಕಿನ ಸದಸ್ಯರ ಸಂಖ್ಯೆ 2497 ಈ ವರ್ಷ ತಮ್ಮ ಸದಸ್ಯತ್ವವನ್ನು ಹಿಂಪಡೆದವರ ಸಂಖ್ಯೆ 188 ಮತ್ತು ಈ ವರ್ಷದಲ್ಲಿ ಹೊಸದಾಗಿ 88 ಜನ ಸದಸ್ಯತ್ವ ಪಡೆದಿದ್ದು ವರ್ಷದ ಕೊನೆಯಲ್ಲಿ ಇದ್ದ ಬ್ಯಾಂಕಿನ ಒಟ್ಟು ಸದಸ್ಯರ ಸಂಖ್ಯೆ 2397 ಅನ್ನು ಒಪ್ಪಿ ಅಂಗೀಕರಿಸಬಹುದು.

**6. 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿ, ಪಾಲನಾ ವರದಿಯ ನಡವಳಿಕೆಗಳನ್ನು ಓದಿ ಒಪ್ಪಿ ಅಂಗೀಕರಿಸುವುದು.**

ಟಿಪ್ಪಣಿ: 27ನೇ ಸರ್ವಸದಸ್ಯರ ಮಹಾಸಭೆಯ ನೋಟಿಸ್‌ನಲ್ಲಿ ನೀಡಲಾದ ಲೆಕ್ಕಪರಿಶೋಧನಾ ವರದಿಗೆ, ಆಡಳಿತ ಮಂಡಲಿ ಸಲ್ಲಿಸಿದ ಪಾಲನಾ ವರದಿಯನ್ನು ಪರಿಶೀಲಿಸಿ ಒಪ್ಪಿ ಅಂಗೀಕರಿಸುವುದು

**7. 2024–25ನೇ ಸಾಲಿನ ಲಾಭ ಹಂಚಿಕೆ ಅನುಮೋದಿಸುವುದು.**

ಟಿಪ್ಪಣಿ: 2024–25ನೇ ಸಾಲಿನಲ್ಲಿ ಬ್ಯಾಂಕು ರೂ 1,58,87,943.00 ಗಳು ಲಾಭಗಳಿಸಿದ್ದು ನೋಟಿಸಿನಲ್ಲಿ ತಿಳಿಸಿದಂತೆ ಲಾಭವನ್ನು ವಿಲೇವಾರಿ ಮಾಡಲಾಗುವುದು.

**8. ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್) ಗಿಂತಲು ಹೆಚ್ಚುವರಿ ಆಗಿರುವ ವೆಚ್ಚಕ್ಕೆ ಅನುಮೋದಿಸುವುದು.**

ಟಿಪ್ಪಣಿ: ಕಳೆದ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್) ಗಿಂತಲು ಕೆಲವು ಶೀರ್ಷಿಕೆಗಳಡಿ ಹೆಚ್ಚಿನ ವೆಚ್ಚವಾಗಿರುತ್ತದೆ ಅದನ್ನು ಪರಿಶೀಲಿಸಿ ಅನುಮೋದಿಸಬಹುದು.

**9. 2025–26ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡುವುದು.**

ಟಿಪ್ಪಣಿ: 2025–26ನೇ ಸಾಲಿನ ಅಂದಾಜು ಆಯ–ವ್ಯಯ (ಬಡ್ಜೆಟ್)ವನ್ನು ಮಂಜೂರು ಮಾಡುಬಹುದಾಗಿದೆ.

**10. 2025–26ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸುವುದು.**

ಟಿಪ್ಪಣಿ: 2025–26ನೇ ಸಾಲಿಗೆ ನಿರ್ದೇಶಕ ಮಂಡಲಿಯು ರೂಪಿಸಿದ ಯೋಜನೆ ಹಾಗೂ ವಾರ್ಷಿಕ ಕಾರ್ಯಕ್ರಮಗಳನ್ನು ಓದಿ ಒಪ್ಪಿ ಅನುಮೋದಿಸಬಹುದು.

**11. 2025–26ನೇ ಸಾಲಿಗೆ ಶಾಸನಬದ್ದ ಲೆಕ್ಕಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ: 23–4–2025 ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ: 06 ರ ಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸುವ ವಿಚಾರ.**

ಟಿಪ್ಪಣಿ: 2025–26ನೇ ಸಾಲಿಗೆ ಶಾಸನಬದ್ದ ಲೆಕ್ಕಪರಿಶೋಧಕರನ್ನು ಮತ್ತು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ದಿನಾಂಕ: 23–4–2025 ರಂದು ನಡೆದ ನಿರ್ದೇಶಕ ಮಂಡಲಿ ಸಭಾ ತೀರ್ಮಾನ ಸಂಖ್ಯೆ: 06 ರ ಅನ್ವಯ ನಿರ್ಣಯಿಸಿರುವುದನ್ನು ಅನುಮೋದಿಸಬಹುದಾಗಿದೆ.

**12. ವಿವಿಧ ಕಾರಣಗಳಿಂದ ತೆರವುಗೊಂಡಿದ್ದ ಬ್ಯಾಂಕಿನ ನಿರ್ದೇಶಕರ ಸ್ಥಾನಕ್ಕೆ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನಗಳ ಅನ್ವಯ ಕೋ–ಆಪ್ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವುದು.**

ಟಿಪ್ಪಣಿ: ವಿವಿಧ ಕಾರಣಗಳಿಂದ ತೆರವುಗೊಂಡಿದ್ದ ಬ್ಯಾಂಕಿನ ನಿರ್ದೇಶಕರ ಸ್ಥಾನಕ್ಕೆ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನಗಳ ಅನ್ವಯ ಕೋ–ಆಪ್ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸಬಹುದಾಗಿದೆ.

**13. ಬ್ಯಾಂಕಿನಲ್ಲಿ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ದಿನಾಂಕ:26–11–2024ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–13ರ ಅನ್ವಯ ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮದ ಪ್ರಕಾರ ಬ್ಯಾಂಕಿನ ಸೇವೆಯಿಂದ ವಜಾಗೊಳಿಸಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ಬ್ಯಾಂಕಿನಲ್ಲಿ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ದಿನಾಂಕ:26–11–2024ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–13ರ ಅನ್ವಯ ಬ್ಯಾಂಕಿನ ಸಿಬ್ಬಂದಿ ಸೇವಾ ನಿಯಮದ ಪ್ರಕಾರ ಬ್ಯಾಂಕಿನ ಸೇವೆಯಿಂದ ವಜಾಗೊಳಿಸಿರುವುದನ್ನು ಪರಿಶೀಲಿಸಿ ಅನುಮೋದಿಸಬಹುದು.

**14. ಬ್ಯಾಂಕಿನ ಭದ್ರಾವತಿ ಶಾಖೆಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯು ದಿನಾಂಕ:15–11–2023ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು ದಿನಾಂಕ: 24–11–2023ರಂದು ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–11ರ ಅನ್ವಯ ರಾಜೀನಾಮೆ ಅಂಗೀಕರಿಸಿದ್ದು ಸದರಿಯವರಿಗೆ ಬ್ಯಾಂಕಿನ ವತಿಯಿಂದ ನೀಡುವ ಕ್ಲೈಮ್ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುವ ವಿಚಾರ.**

ಟಿಪ್ಪಣಿ: ಬ್ಯಾಂಕಿನ ಭದ್ರಾವತಿ ಶಾಖೆಯಲ್ಲಿ ಸಹಾಯಕ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯು ದಿನಾಂಕ:15–11–2023ರಂದು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದ್ದು ದಿನಾಂಕ:24–11–2023ರಂದು ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–11ರ ಅನ್ವಯ ರಾಜೀನಾಮೆ ಅಂಗೀಕರಿಸಿದ್ದು ಸದರಿಯವರಿಗೆ ಬ್ಯಾಂಕಿನ ವತಿಯಿಂದ ನೀಡುವ ಕ್ಲೈಮ್ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಬಹುದು.

15. **ದಿನಾಂಕ:23–04–2025 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–16 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸುವುದು.**

ಟಿಪ್ಪಣಿ: ದಿನಾಂಕ:23–04–2025 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–16 ರನ್ವಯ ಸಿಬ್ಬಂದಿ ವೃಂದ ಬಲ ಮತ್ತು ವೇತನ ಶ್ರೇಣಿಯನ್ನು ಪರಿಶೀಲಿಸಿ ಓದಿ ಒಪ್ಪಿ ಅನುಮೋದಿಸಬಹುದು.

16. **ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಂಗಾಮಿ ನೌಕರನನ್ನು ದಿನಾಂಕ:28–03–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–19(1)ರ ಅನ್ವಯ ಖಾಯಂ ಸಿಬ್ಬಂದಿಯಾಗಿ ನೇಮಕ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಂಗಾಮಿ ನೌಕರನನ್ನು ದಿನಾಂಕ:28–03–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–19(1)ರ ಅನ್ವಯ ಖಾಯಂ ಸಿಬ್ಬಂದಿಯಾಗಿ ನೇಮಕ ಮಾಡಿಕೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸಬಹುದು.

17. **ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ಚರ್ಚಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ಬ್ಯಾಂಕಿನ ವತಿಯಿಂದ ಸಾಲ ಪಡೆದು ದೀರ್ಘಕಾಲದವರೆಗೂ ಸುಸ್ತಿಯಾಗಿರುವ ಸಾಲದ ಖಾತೆಗಳ ಬಗ್ಗೆ ನಿರ್ದೇಶಕ ಮಂಡಳಿಯು ಕೈಗೊಂಡಿರುವ ಕ್ರಮ ಪರಿಶಿಲಿಸಿ ಅನುಮೋದಿಸಬಹುದು.

18. **ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯಿದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರಿಂದ ಸಾಲ ವಸೂಲಾತಿಗಾಗಿ ಸೆಕ್ಯುರಿಟೈಸೇಷನ್ ಕಾಯಿದೆ ಅನ್ವಯ ಕ್ರಮ ಜರುಗಿಸಿ ಹರಾಜು ಕ್ರಮ ಕೈಗೊಂಡಿರುವುದನ್ನು ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ದಾವಾ ಹೂಡಿ ಕ್ರಮ ಕೈಗೊಂಡಿರುವುದನ್ನು ಒಪ್ಪಿ ಅನುಮೋದಿಸಬಹುದು.

19. **ದಿನಾಂಕ;25–07–2024ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ತೀರ್ಮಾನ ಸಂಖ್ಯೆ–19(1)ರ ಅನ್ವಯ ಸಾಲ ಸಂಗ್ರಹಣೆ ಮತ್ತು ಸಾಲ ವಸೂಲಾತಿ ನಿಯಯವನ್ನು ರಚಿಸಿಕೊಂಡಿದ್ದರ ಅನ್ವಯ ದಿನಾಂಕ:23–04–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–10ರ ಅನ್ವಯ ಕ್ರಮ ಕೈ ಗೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ದಿನಾಂಕ;25–07–2024ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ತೀರ್ಮಾನ ಸಂಖ್ಯೆ–19(1)ರ ಅನ್ವಯ ಸಾಲ ಸಂಗ್ರಹಣೆ ಮತ್ತು ಸಾಲ ವಸೂಲಾತಿ ನಿಯಯವನ್ನು ರಚಿಸಿಕೊಂಡಿದ್ದರ ಅನ್ವಯ ದಿನಾಂಕ:23–04–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–10ರ ಅನ್ವಯ ಕ್ರಮ ಕೈ ಗೊಂಡಿರುವುದನ್ನು ಪರಿಶೀಲಿಸಿ ಅನುಮೋದಿಸಬಹುದು.

20. **ದಿನಾಂಕ:27–07–2023 ಹಾಗೂ 25–07–2024 ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭಾ ತೀರ್ಮಾನಗಳ ಅನ್ವಯ ಹೆಚ್ಚುವರಿ ಷೇರು ಧನ ತೊಡಗಿಸದೇ ಇರುವ ಸದಸ್ಯರುಗಳ ಬಗ್ಗೆ ದಿನಾಂಕ:27–06–2025 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–13ರ ಅನ್ವಯ ಕ್ರಮ ಕೈಗೊಳ್ಳಲು ನಿರ್ಣಯಿಸಿರುವುದನ್ನು ಒಪ್ಪಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ದಿನಾಂಕ:27–07–2023 ಹಾಗೂ 25–07–2024 ರಂದು ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭಾ ತೀರ್ಮಾನಗಳ ಅನ್ವಯ ಹೆಚ್ಚುವರಿ ಷೇರು ಧನ ತೊಡಗಿಸದೇ ಇರುವ ಸದಸ್ಯರುಗಳ ಬಗ್ಗೆ ದಿನಾಂಕ:27–06–2025 ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–13ರ ಅನ್ವಯ ಕ್ರಮ ಕೈಗೊಳ್ಳಲು ನಿರ್ಣಯಿಸಿರುವುದನ್ನು ಒಪ್ಪಿ ಅನುಮೋದಿಸಬಹುದು.

21. **ದಿನಾಂಕ:23–04–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–23(1)ರ ಅನ್ವಯ ಬ್ಯಾಂಕಿನಲ್ಲಿ ಹಾಲಿ ಹೊಂದಿರುವ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಲು ಕೈಗೊಂಡಿರುವ ನಿರ್ಣಯವನ್ನು ಪರಿಶೀಲಿಸಿ ಅನುಮೋದಿಸುವ ವಿಚಾರ.**

ಟಿಪ್ಪಣಿ: ದಿನಾಂಕ:23–04–2025ರಂದು ನಡೆದ ನಿರ್ದೇಶಕ ಮಂಡಲಿಯ ಸಭಾ ತೀರ್ಮಾನ ಸಂಖ್ಯೆ–23(1)ರ ಅನ್ವಯ ಬ್ಯಾಂಕಿನಲ್ಲಿ ಹಾಲಿ ಹೊಂದಿರುವ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಲು ಕೈಗೊಂಡಿರುವ ನಿರ್ಣಯವನ್ನು ಪರಿಶೀಲಿಸಿ ಅನುಮೋದಿಸಬಹುದು.

22. **ಬ್ಯಾಂಕಿನಲ್ಲಿ ಹಾಲಿ ಹೊಂದಿರುವ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಲು ಆಗುವ ಖರ್ಚು ವೆಚ್ಚಗಳಿಗೆ ಅನುಮೋದನೆ ನೀಡುವ ವಿಚಾರ.**

ಟಿಪ್ಪಣಿ: ಬ್ಯಾಂಕಿನಲ್ಲಿ ಹಾಲಿ ಹೊಂದಿರುವ SIDDSOFT TECH PVT LTD ಸಾಫ್ಟ್‌ವೇರ್ ನಿಂದ IISPL(AVISHKAR CBSE) ಸಾಫ್ಟ್‌ವೇರ್‌ಗೆ ಬದಲಾಯಿಸಲು ಆಗುವ ಖರ್ಚು ವೆಚ್ಚಗಳಿಗೆ ಅನುಮೋದಿಸಬಹುದು.

23. **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರಬಹುದಾದ ಇತರೆ ವಿಷಯಗಳು.**

ಟಿಪ್ಪಣಿ: ಸದಸ್ಯರಿಂದ ಬರಬಹುದಾದ ಲಿಖಿತ ಪ್ರಶ್ನೆಗಳಿಗೆ ಉತ್ತರಿಸುವುದು.



# ಶ್ರೀ ಡಿ. ಆದಿರಾಜಯ್ಯ


**ಉಪಾಧ್ಯಕ್ಷರು**

| | |
|---|---|
| ಉಪಾಧ್ಯಕ್ಷರು | : ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಹೊಸದುರ್ಗ |
| ಉಪಾಧ್ಯಕ್ಷರು | : ಶ್ರೀ ಗಣೇಶ ಸದನ ಟ್ರಸ್ಟ್ (ರಿ.), ಹೊಸದುರ್ಗ |
| ಉಪಾಧ್ಯಕ್ಷರು | : ವರ್ತಕರ ಸಂಘ (ರಿ.), ಹೊಸದುರ್ಗ |
| ಉಪಾಧ್ಯಕ್ಷರು | : ಮಹಾತ್ಮ ಗಾಂಧಿ ವಿದ್ಯಾ ಸಂಸ್ಥೆ (ರಿ.), ಹೊಸದುರ್ಗ |
| ಉಪಾಧ್ಯಕ್ಷರು | : ಶ್ರೀ ಶಿರಡಿ ಸಾಯಿಬಾಬಾ ಟ್ರಸ್ಟ್ (ರಿ.), ಹೊಸದುರ್ಗ |

# ಆಡಳಿತ ಮಂಡಳಿ ಸದಸ್ಯರು



**ಶ್ರೀ. ಹಂಜಿ ಶಿವಸ್ವಾಮಿ**
ಅಧ್ಯಕ್ಷರು



**ಶ್ರೀ. ಡಿ. ಆದಿರಾಜಯ್ಯ**
ಉಪಾಧ್ಯಕ್ಷರು



**ಶ್ರೀ. ಬಿ. ವಿ. ಕುಶಕುಮಾರ್**
ನಿರ್ದೇಶಕರು



**ಶ್ರೀ. ಟಿ.ಎನ್.ಗುರುಮೂರ್ತಿ**
ನಿರ್ದೇಶಕರು



**ಶ್ರೀ. ಎನ್.ಎಸ್.ಓಬಯ್ಯ**
ನಿರ್ದೇಶಕರು



**ಶ್ರೀ ಬಾಹುಬಲಿ ಇ. ಟಿ.**
ನಿರ್ದೇಶಕರು

# ಆಡಳಿತ ಮಂಡಲಿ ಸದಸ್ಯರು



**ಶ್ರೀ. ಶ್ರೀನಿವಾಸಯ್ಯ ಬಿ. ಎಸ್.**
ನಿರ್ದೇಶಕರು



**ಶ್ರೀ ತಿಪ್ಪೇಸ್ವಾಮಿ ಜಿ.ಎನ್.**
ನಿರ್ದೇಶಕರು



**ಶ್ರೀ ಕೆ.ಸಿ. ಮಲ್ಲಾನಾಯ್ಕ**
ನಿರ್ದೇಶಕರು



**ಶ್ರೀ ಶ್ರೀನಾಥ ಟಿ.ಎಸ್.**
ನಿರ್ದೇಶಕರು



**ಶ್ರೀಮತಿ. ವೀಣಾ ಎಸ್. ರಾವ್**
ನಿರ್ದೇಶಕರು



**ಶ್ರೀಮತಿ. ಪಾರ್ವತಮ್ಮ ಟಿ. ಸಿ.**
ನಿರ್ದೇಶಕರು



**ಶ್ರೀಮತಿ. ಲೀಲಾಂಬ ಕೆ.**
ನಿರ್ದೇಶಕರು



**ಶ್ರೀ. ಎಸ್. ಮೋಹನ್**
ವೃತ್ತಿಪರ ನಿರ್ದೇಶಕರು
ಚಾರ್ಟರ್ಡ್ ಅಕೌಂಟೆಂಟ್



**ಶ್ರೀಮತಿ ನಾಗಲಾಂಬಿಕ ಕಲ್ಮಠ್**
ವೃತ್ತಿಪರ ನಿರ್ದೇಶಕರು
ನಿವೃತ್ತ ಹಿರಿಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್

# ಕಾರ್ಯನಿರ್ವಹಣಾ ಸಮಿತಿ ಸದಸ್ಯರು (BOM)



**ಶ್ರೀ. ಡಿ. ಆದಿರಾಜಯ್ಯ**
ಅಧ್ಯಕ್ಷರು



**ಶ್ರೀ. ಎಸ್. ಮೋಹನ್**
ಚಾರ್ಟರ್ಡ್ ಅಕೌಂಟೆಂಟ್



**ಶ್ರೀಮತಿ ನಾಗಲಾಂಬಿಕ ಕಲ್ಮಠ್**
ನಿವೃತ್ತ ಹಿರಿಯ ವ್ಯವಸ್ಥಾಪಕರು,
ಕೆನರಾ ಬ್ಯಾಂಕ್



**ಶ್ರೀ ರಮೇಶ ಪಿ. ವಿ.**
ನಿವೃತ್ತ ಹಿರಿಯ ವ್ಯವಸ್ಥಾಪಕರು
ಐ.ಎನ್.ಜಿ. ವೈಶ್ಯ ಬ್ಯಾಂಕ್



**ಶ್ರೀ ಪ್ರತಾಪ ಎನ್.**
ವಕೀಲರು,
ಕಾನೂನು ಸಲಹೆಗಾರರು



**ಶ್ರೀ ನಾಗರಾಜಶಾಸ್ತ್ರಿ ಕುರ್ತಕೋಟಿ**
ನಿವೃತ್ತ ವ್ಯವಸ್ಥಾಪಕರು
ಎಸ್.ಬಿ.ಐ.




# 27ನೇ ಸರ್ವಸದಸ್ಯರ ಮಹಾಸಭೆಯ ವಾರ್ಷಿಕ ವರದಿ

**ಸನ್ಮಾನ್ಯ ಸಹಕಾರಿ ಬಂಧುಗಳೇ, ಸಸ್ನೇಹ ನಮಸ್ಕಾರಗಳು,**

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಆಡಳಿತ ಮಂಡಲಿ ಪರವಾಗಿ ತಮ್ಮೆಲ್ಲರನ್ನೂ **"ಸರ್ವಸದಸ್ಯರ ವಾರ್ಷಿಕ ಮಹಾಸಭೆ "** ಗೆ ಹಾರ್ದಿಕವಾಗಿ ಸ್ವಾಗತಿಸುತ್ತೇನೆ.

2024–25ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ವರದಿಯನ್ನು ತಮ್ಮಗಳ ಮುಂದೆ ಪ್ರಸ್ತುತ ಪಡಿಸುವ ದೆಸೆಯಲ್ಲಿ ಬ್ಯಾಂಕಿನ ಒಂದು ವರ್ಷದ ಸಾಧನೆಯನ್ನು ತಮ್ಮಗಳ ಮುಂದೆ ಹಾಜರು ಪಡಿಸುತ್ತಾ ಬ್ಯಾಂಕಿನ ಸಾಲ ವಸೂಲಾತಿಯ ಬಗ್ಗೆ, ಬ್ಯಾಂಕಿನ ವತಿಯಿಂದ ಸಾಲ ಪಡೆದು ಸುಸ್ತಿದಾರರಾಗಿರುವ ಸಾಲಗಾರರುಗಳ ಬಗ್ಗೆ ಕೆಲವು ಅಂಶಗಳನ್ನು ಮಹಾಸಭೆಯಲ್ಲಿ ಪ್ರಸ್ತುತ ಪಡಿಸುತ್ತಾ ಸಾಲ ವಸೂಲಾತಿಯ ದೆಸೆಯಲ್ಲಿ ನಾವುಗಳು ಅನುಭವಿಸಿದ ಕೆಲವು ತೊಂದರೆಗಳನ್ನು ತಮ್ಮ ಮುಂದೆ ವ್ಯಕ್ತಪಡಿಸಿಕೊಳ್ಳಲು ಇಚ್ಛಿಸುತ್ತೇನೆ.

ಇತ್ತೀಚಿನ ದಿನಗಳಲ್ಲಿ ಸಾಲ ಪಡೆದ ಸಾಲಗಾರರು ಸಾಲ ಪಡೆದ ಬ್ಯಾಂಕುಗಳಿಗೆ ಸಾಲವನ್ನು ಮರುಪಾವತಿಸದೆ ತನ್ನ ಅತೀ ಜಾಣ್ಮೆ, ಬುದ್ಧಿವಂತಿಕೆಯಿಂದ ವಿನಾಕಾರಣವಾಗಿ ವಿಳಂಬ ಮಾಡುತ್ತಿದ್ದು, ತಮ್ಮದೇ ಆದ ಅತೀ ಬುದ್ಧಿವಂತಿಕೆಯ ಶಕ್ತಿಯನ್ನು ಉಪಯೋಗಿಸಿಕೊಂಡು ಬ್ಯಾಂಕುಗಳಿಗೆ ಮೋಸ ಮಾಡುವ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಅದರಲ್ಲಿಯೂ ಪ್ರಸಕ್ತ ಸಾಲಿನಲ್ಲಿ ನಮಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಮನದಟ್ಟಾಗಿದೆ.

ಬ್ಯಾಂಕಿನ ವತಿಯಿಂದ ಸಾಲ ಪಡೆದ ವ್ಯಕ್ತಿ ತನ್ನ ಅತೀ ಬುದ್ಧಿವಂತಿಕೆಯಿಂದ ಹಣಕಾಸು ಸಂಸ್ಥೆಗೆ ಹಾಜರು ಪಡಿಸಿರುವ ದಾಸ್ತಾವೇಜುಗಳನ್ನು ಮರು ಮುದ್ರಿಸಿ (ಕಲರ್ ಝೆರಾಕ್ಸ್) ಬೇರೆ ಬೇರೆ ಬ್ಯಾಂಕುಗಳಲ್ಲಿ ಇಲ್ಲವೇ ಹಣಕಾಸು ಸಂಸ್ಥೆಗಳಲ್ಲಿ ಸಾಲ ಪಡೆದು ಮೊದಲು ಸಾಲ ನೀಡಿದ ಹಣಕಾಸು ಸಂಸ್ಥೆಗಳಿಗೆ ವಿನಾಕಾರಣ ತೊಂದರೆ ನೀಡುತ್ತಿರುವುದನ್ನು ಇತ್ತೀಚಿನ ದಿನಗಳಲ್ಲಿ ನಾವುಗಳು ಗಮನಿಸುತ್ತಿರುವುದನ್ನು ತಮ್ಮಗಳ ಮುಂದೆ ಸಾದರಪಡಿಸಲು ಇಚ್ಛಿಸುತ್ತೇನೆ.

ಇಂತಹ ಪ್ರಕರಣಗಳ ಕಹಿ ಅನುಭವವನ್ನು ನಮ್ಮ ಬ್ಯಾಂಕು ಕೂಡ ಅನುಭವಿಸಿದ್ದು, ಸಾಕಷ್ಟು ಕಷ್ಟ–ನಷ್ಟಗಳನ್ನು ಎದುರಿಸಿದ್ದೇವೆ. ಇಂತಹ ಸಾಲಗಾರರುಗಳ ಮೇಲೆ ಕಾನೂನಿನ ಅನ್ವಯ ಕ್ರಮಕೈಗೊಂಡರೂ ಸಹ ಸಾಲ ಪಡೆದ ವ್ಯಕ್ತಿಗಳು ಸಾಲವನ್ನು ಮರುಪಾವತಿಸದೆ ವಿಳಂಬ ನೀತಿ ಅನುಸರಿಸುತ್ತಿದ್ದು, ಬ್ಯಾಂಕಿನ ಅನುತ್ಪಾದಕ ಆಸ್ತಿ ಹೆಚ್ಚುತ್ತಾ ಬರುತ್ತಿರುವುದು ಕಳವಳಕಾರಿ ವಿಷಯ. ಸಾಲ ವಸೂಲಾತಿ ಬಗ್ಗೆ ಕಠಿಣ ಕ್ರಮ ಕೈಗೊಳ್ಳುತ್ತಿದ್ದು, ಸಾಲಗಾರರುಗಳು ತಮ್ಮ ಗೌರವಕ್ಕೆ ಚ್ಯುತಿ ಬರುವುದೆಂದು ತಿಳಿದಿದ್ದರೂ ಕೂಡ ಬ್ಯಾಂಕುಗಳಿಗೆ ಮೋಸ ಮಾಡುತ್ತಿರುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿದ್ದು ನಮ್ಮ ಬ್ಯಾಂಕನ್ನು ಪ್ರಾಮಾಣಿಕ ಹಾದಿಯಲ್ಲಿ ನಡೆಸುವ ವ್ಯವಸ್ಥೆಯಲ್ಲಿ ನಾವುಗಳು ಬಹಳಷ್ಟು ತೊಂದರೆ ಅನುಭವಿಸುತ್ತಿದ್ದೇವೆ.

ಈ ಪ್ರಕರಣಗಳು ಬ್ಯಾಂಕಿನ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಿದ್ದು, ಬ್ಯಾಂಕಿನ ಸಾಲ ವಸೂಲಾತಿಗಾಗಿ ಹಲವು ಸಾಲಗಾರರುಗಳ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ದಾವೆ, ಪೋಲೀಸ್ ಠಾಣೆಗಳಲ್ಲಿ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಿರುತ್ತೇವೆ.

ಇಂತಹ ತಪ್ಪಿತಸ್ಥರ ವಿರುದ್ದ ದೊಡ್ಡ ಹೋರಾಟವನ್ನೇ ನಾವು ನಡೆಸಿಕೊಂಡು ಬರುತ್ತಿದ್ದೇವೆ. ತಪ್ಪಿತಸ್ಥರ ವಿರುದ್ಧ ನ್ಯಾಯಕ್ಕಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದರೊಂದಿಗೆ ಬ್ಯಾಂಕಿನ ಆರ್ಥಿಕ ಅಭಿವೃದ್ಧಿಗೆ ಧಕ್ಕೆ ಬಾರದ ರೀತಿಯಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿರುತ್ತೇವೆ.

ಪ್ರಸಕ್ತ ಸಾಲಿನಲ್ಲಿ ಬ್ಯಾಂಕಿನ ಆರ್ಥಿಕ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಲು ಹಲವಾರು ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಈ ದೆಸೆಯಲ್ಲಿ 2024–25ನೇ ಸಾಲಿನಲ್ಲಿ ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಸದಸ್ಯರುಗಳನ್ನು ಹಾಗೂ ಗ್ರಾಹಕರುಗಳನ್ನು ಬರಮಾಡಿಕೊಂಡು ಗ್ರಾಹಕರ ಸಭೆಯನ್ನು ಯಶಸ್ವಿಯಾಗಿ ನಡೆಸಿರುತ್ತೇವೆ. ಈ ಗ್ರಾಹಕರ ಸಭೆಯಲ್ಲಿ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಹೊಸ ಹೊಸ ಯೋಜನೆಗಳನ್ನು ಪ್ರಚುರಪಡಿಸುವುದರೊಂದಿಗೆ ಈ ಸಾಲಿನಲ್ಲಿ ಯಶಸ್ಸನ್ನು ಕಂಡಿರುತ್ತೇವೆ. ಇದರಿಂದಾಗಿ ನಮ್ಮ ಬ್ಯಾಂಕು ಹೊಂದಿರುವ ನಂಬಿಕೆ ಹಾಗೂ ವಿಶ್ವಾಸವನ್ನು ಗಳಿಸಿ ಗೌರವಾನ್ವಿತ ಗ್ರಾಹಕರುಗಳಿಂದ ಠೇವಣಿಯನ್ನು ಪಡೆಯುವ ದೆಸೆಯಲ್ಲಿ ನಾವುಗಳು ಸಾಕಷ್ಟು ಶ್ರಮವಹಿಸಿ ಯಶಸ್ಸಿನ ಹಾದಿಯಲ್ಲಿ ಸಾಗಿದ್ದೇವೆ ಎಂಬ ಅಂಶವನ್ನು ತಮ್ಮಗಳ ಸಮಕ್ಷಮದಲ್ಲಿ ವ್ಯಕ್ತಪಡಿಸಲು ಹರ್ಷಿಸುತ್ತೇನೆ.

ಬ್ಯಾಂಕಿನ ಆಡಳಿತ ನಡೆಸುವ ದೆಸೆಯಲ್ಲಿ ಬ್ಯಾಂಕಿನ ಸದಸ್ಯರುಗಳಿಗೆ, ಗ್ರಾಹಕ ಬಂಧುಗಳಿಗೆ ಕಂಡು ಬರುವ ಹಲವಾರು ನ್ಯೂನ್ಯತೆಗಳ ಬಗ್ಗೆ ಪರಿಹಾರ ಕಂಡುಕೊಳ್ಳುವ ದೆಸೆಯಲ್ಲಿ ನಾವು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ ಎಂಬ ಅಂಶವನ್ನು ತಮ್ಮ ಮುಂದೆ ವ್ಯಕ್ತಪಡಿಸಲು ಇಚ್ಛಿಸುತ್ತೇನೆ. ಬ್ಯಾಂಕು ತನ್ನ ಆಡಳಿತ ವ್ಯವಸ್ಥೆಯಲ್ಲಿ ಗ್ರಾಹಕರುಗಳ ವಿಶ್ವಾಸದೊಂದಿಗೆ ಠೇವಣಿ ಸಂಗ್ರಹಣೆಯಲ್ಲಿ ಯಾವ ಕೊರತೆಯನ್ನೂ ಕಾಣದೆ ಮುನ್ನಡೆಸುತ್ತಿರುವ ವಿಷಯವನ್ನು ಸಂತೋಷದಿಂದ ತಮ್ಮ ಮುಂದೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇನೆ. ಸಾಲ ಪಡೆದು ಸುಸ್ತಿದಾರರಾಗಿರುವ ಅಪ್ರಾಮಾಣಿಕ ವ್ಯಕ್ತಿಗಳು ನಮ್ಮ ಬ್ಯಾಂಕಿಗೆ ನೀಡುತ್ತಿರುವ ತೊಂದರೆಯನ್ನು ಗಮನಿಸಿದಲ್ಲಿ ಬ್ಯಾಂಕಿನಿಂದ ಸಾಲ ನೀಡಲು ಸದ್ಯದ ಪರಿಸ್ಥಿತಿಯಲ್ಲಿ ಹಿನ್ನಡೆಯನ್ನು ಅನುಭವಿಸುತ್ತಿದ್ದೇವೆ ಎಂಬ ಅಂಶವನ್ನು ತಮ್ಮಗಳ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇದಕ್ಕೆ ಪೂರಕವಾಗಿ ನಾನು ಎದೆಗುಂದದೆ ಮುಂದಿನ ಸಾಲಿನಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಪ್ರಾಮಾಣಿಕತೆಯ ಮೇಲೆ ವಿಶ್ವಾಸವನ್ನು ಇಟ್ಟುಕೊಳ್ಳುವ ಮೂಲಕ ಬ್ಯಾಂಕು ಸಂಗ್ರಹಿಸುವ ಠೇವಣಿಗೆ ಪೂರಕವಾಗಿ ಸಾಲ ನೀಡದೇ ಇದ್ದ ಪಕ್ಷದಲ್ಲಿ ಅದು ಉಪಯುಕ್ತವಾಗುವುದಿಲ್ಲ ಎಂಬ ಅಂಶವು ಈಗಾಗಲೇ ನಮಗೆ ಮನವರಿಕೆಯಾಗಿದೆ. ಆದ್ದರಿಂದ ಮುಂದಿನ ದಿನಗಳಲ್ಲಿ ಖಂಡಿತವಾಗಿಯೂ ಕೂಡ ಉಪಯುಕ್ತ ಸಂಭಾವಿತ ವ್ಯಕ್ತಿಗಳನ್ನು ಗುರುತಿಸಿ ಸಾಲ ನೀಡಿ ಬ್ಯಾಂಕಿನ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡುತ್ತೇವೆ ಎಂಬ ಅಂಶವನ್ನು ನಿಮ್ಮ ಮುಂದೆ ವ್ಯಕ್ತಪಡಿಸಲು ಇಚ್ಛಿಸುತ್ತೇನೆ.

ಕಳೆದ ಎರಡು ದಶಕಗಳಿಂದಲೂ ಸಹ ನಮ್ಮ ಬ್ಯಾಂಕು ವರ್ಷದಿಂದ ವರ್ಷಕ್ಕೆ ಠೇವಣಿ ಸಂಗ್ರಹಣೆ, ಸಾಲ ನೀಡಿಕೆ, ಬ್ಯಾಂಕಿನ ವ್ಯವಹಾರ ಅಭಿವೃದ್ಧಿಯ ಕಾರ್ಯಗಳಲ್ಲಿ ಹಿಂದೆ ಬಿದ್ದಿಲ್ಲ. ಭಾರತೀಯ ರಿಸರ್ವ್ ಬ್ಯಾಂಕಿನ ಹಲವು ಕಠಿಣ ಮಾರ್ಗಸೂಚಿ, ನೀತಿ ನಿಯಮಗಳನ್ನು ಗೌರವಯುತವಾಗಿ ಸ್ವೀಕರಿಸಿ ನಮ್ಮ ಬ್ಯಾಂಕಿನ ಆಡಳಿತದಲ್ಲಿಯೂ ಅಳವಡಿಸಿ ಯಾವ ನ್ಯೂನ್ಯತೆಗಳೂ ಕೂಡ ಬಾರದ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದೇವೆ ಎಂಬ ವಿಷಯವನ್ನು ಆತ್ಮಸಂತೋಷದಿಂದ ತಮ್ಮ ಮುಂದೆ ವ್ಯಕ್ತಪಡಿಸಲು ಸಂತೋಷವೆನಿಸಿದೆ.

ರಾಜ್ಯದ ಹಾಗೂ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿಲ್ಲದೇ, ಕೈಯಲ್ಲಿ ಹಣಕಾಸು ಇಲ್ಲದೇ ಹಲವಾರು ತೊಂದರೆಗಳನ್ನು ಗ್ರಾಹಕ ವರ್ಗದವರು ಅನುಭವಿಸುತ್ತಿದ್ದರೂ ಸಹ, ರಾಜ್ಯದ ವ್ಯವಹಾರ ಹಾಗೂ ಉದ್ದಿಮೆ ಅವಲಂಬನೆಯು ರಾಜ್ಯದ ಪ್ರಗತಿಗೆ ಕುಂಠಿತವಾಗಿದ್ದರೂ ಸಹ ನಾವುಗಳು ಯಶಸ್ಸನ್ನು ಕಾಣುವ ದೆಸೆಯಲ್ಲಿ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕಾಗಿದೆ ಎಂಬುದರಲ್ಲಿ ಸಂಶಯವಿರುವುದಿಲ್ಲ.

ಅಂತಿಮವಾಗಿ ಬ್ಯಾಂಕಿನ ಆಡಳಿತ ವರ್ಷದ ಅವಧಿಯಲ್ಲಿ ಸಾಕಷ್ಟು ಏರಿಳಿತಗಳನ್ನು ಕಂಡುಕೊಂಡಿದ್ದು, ನಾವುಗಳು ಅಧೈರ್ಯಪಡದೇ ಪ್ರಗತಿಯ ಹಾದಿಗೆ ತೊಂದರೆಯಾಗದಂತೆ ಮುನ್ನಡೆಸಿಕೊಂಡು ಹೋಗುವ ದೆಸೆಯಲ್ಲಿ ನನ್ನ ಆಡಳಿತದಲ್ಲಿ ನಮ್ಮ ನಿರ್ದೇಶಕ ಮಂಡಲಿಯು ಸಂಪೂರ್ಣ ಸಹಕಾರವನ್ನು ನೀಡುತ್ತಾ ಬಂದಿರುವುದು ಶ್ಲಾಘನೀಯ. ಆ ದೆಸೆಯಲ್ಲಿ ಆಡಳಿತ ಮಂಡಲಿಯ ಗೌರವಾನ್ವಿತ ಎಲ್ಲಾ ಸದಸ್ಯರುಗಳಿಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರಿಗೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು ನಾನು ಸಲ್ಲಿಸದೇ ಇದ್ದಲ್ಲಿ ಅಪರಾಧವೆನಿಸುತ್ತದೆ.

ಮೇಲೆ ಪ್ರಸ್ತಾಪಿಸಿದ ಎಲ್ಲಾ ಅಂಶಗಳನ್ನು ಸಹಕಾರಿ ಬಂಧುಗಳ ಗಮನಕ್ಕೆ ತರಬಯಸುತ್ತಾ ಪ್ರಸಕ್ತ ಸಾಲಿನಲ್ಲಿ ಬ್ಯಾಂಕು ಅಭಿವೃದ್ಧಿಯನ್ನು ಕಂಡುಕೊಂಡಿದ್ದು, ವೈಯಕ್ತಿಕವಾಗಿ ಅಧ್ಯಕ್ಷನಾದ ನನಗೆ ತೃಪ್ತಿ ತಂದಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ವಿವಿಧ ನ್ಯಾಯಾಲಯಗಳಲ್ಲಿರುವ ಸುಸ್ತಿ ಸಾಲ ಪ್ರಕರಣಗಳನ್ನು ತ್ವರಿತವಾಗಿ ಬಗೆಹರಿಸುವ ಕ್ರಮಕೈಗೊಂಡು ಬ್ಯಾಂಕಿನ ಸಾಲ ವಸೂಲಾತಿಯನ್ನು ಪ್ರಗತಿದಾಯಕಗೊಳಿಸುವುದಾಗಿ ತಿಳಿಸಲಿಚ್ಛಿಸುತ್ತೇನೆ. ಇದಕ್ಕೆ ನಿಮ್ಮಗಳೆಲ್ಲರ ಸಹಕಾರ, ಆಶೀರ್ವಾದ, ಪ್ರೋತ್ಸಾಹವನ್ನು ನಿರೀಕ್ಷಿಸುತ್ತಾ ನಮ್ಮ ಬ್ಯಾಂಕಿನ ಮುಂಬರುವ ಸಾಲಿನ ಠೇವಣಿ ಸಂಗ್ರಹಣೆಯ, ಸಾಲ ವಸೂಲಾತಿಯ ಕಾರ್ಯ ಚಟುವಟಿಕೆಗಳಿಗೆ ಹೊಸ ಹಾದಿಯನ್ನು ಕಂಡುಕೊಳ್ಳುತ್ತೇನೆ ಎಂಬ ಸಂಪೂರ್ಣ ಭರವಸೆಯೊಂದಿಗೆ ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ.

ಕಾರ್ಯಕಾರಿ ಮಂಡಲಿ ಪರವಾಗಿ,

**ಸಹಕಾರಿ ವಂದನೆಗಳು**

**(ಹಂಜಿ ಶಿವಸ್ವಾಮಿ)**
**ಅಧ್ಯಕ್ಷರು**

## ಬ್ಯಾಂಕಿನ ಇತಿಹಾಸ

ಶ್ರೀ ಸೀತಾರಾಘವ ಸಹಕಾರ ಸಂಘವು 1914ರಲ್ಲಿ ಸ್ಥಾಪನೆಗೊಂಡು ಹಲವಾರು ಏರು-ಇಳಿತಗಳೊಂದಿಗೆ ಸಂಸ್ಥೆಯು 1993ರಲ್ಲಿ ಪುನಶ್ಚೇತನಗೊಂಡು ಐದು ವರ್ಷಗಳ ಕಾಲ ಪತ್ತಿನ ಸಹಕಾರ ಸಂಘವಾಗಿ ವ್ಯವಹಾರದಲ್ಲಿ ತೊಡಗಿಸಿಕೊಂಡು 1998ರಲ್ಲಿ ಸಹಕಾರ ಬ್ಯಾಂಕ್ ಆಗಿ ಪರಿವರ್ತನೆಗೊಂಡು, 2001ರಿಂದ ಸೌಹಾರ್ದ ಸಹಕಾರ ಬ್ಯಾಂಕ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಜಿಲ್ಲೆಯಲ್ಲಿ ಹೆಚ್ಚಿನ ಅವಧಿಯ ಬ್ಯಾಂಕಿಂಗ್ ಸೇವೆ ನೀಡುತ್ತಿರುವ ಬ್ಯಾಂಕ್ ಆಗಿರುತ್ತದೆ, ದಿನಾಂಕ 20-11-2014 ರಂದು 61ನೇ ಅಖಿಲ ಭಾರತ ಸಹಕಾರ ಸಪ್ತಾಹದ ಸಮಾರೋಪ ಸಮಾರಂಭವು ಬೆಳಗಾವಿ ನಗರದ ಗಾಂಧಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಘನತೆವೆತ್ತ ರಾಜ್ಯಪಾಲರಿಂದ "ಉತ್ತಮ ಸೌಹಾರ್ದ ಸಹಕಾರಿ ಪ್ರಶಸ್ತಿ"ಯನ್ನು ಪಡೆಯಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ನಿಯಂತ್ರಣಕ್ಕೆ ಒಳಪಟ್ಟು ಸೌಹಾರ್ದ ಸಹಕಾರ ಬ್ಯಾಂಕ್ ಆಗಿ ಸೇವೆ ಸಲ್ಲಿಸುತ್ತಿದೆ.

## ಶಾಖೆಗಳು

ನಮ್ಮ ಬ್ಯಾಂಕಿನ ಪ್ರಥಮ ಶಾಖೆಯು ಚಿಕ್ಕಮಗಳೂರು ಜಿಲ್ಲೆ ಕಡೂರು ನಗರದಲ್ಲಿ ದಿನಾಂಕ : 20-09-2010ರಂದು ಪ್ರಾರಂಭಗೊಂಡು, ಕಡೂರು ನಗರ ಹಾಗೂ ತಾಲ್ಲೂಕಿನ ಜನತೆಯ ಸಹಕಾರದಿಂದ ಶಾಖೆಯು ವ್ಯವಹಾರ, ವಹಿವಾಟು, ಪ್ರಗತಿದಾಯಕವಾಗಿ ಸಾಗುತ್ತಿದ್ದು, ದಿನಾಂಕ 09-08-2019 ರಂದು ಬ್ಯಾಂಕಿನ ಕಡೂರು ಶಾಖೆಯ ವ್ಯವಹಾರವನ್ನು ಕಡೂರು ನಗರದ ಕೆ.ವಿ. ಬಡಾವಣೆಯಲ್ಲಿ ನೂತನವಾಗಿ ನಿರ್ಮಾಣಗೊಳಿಸಿ ಕೊಂಡಿರುವ ಸುಸಜ್ಜಿತವಾದ ಭವ್ಯ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ. ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳ ಆರ್ಥಿಕ ವ್ಯವಹಾರಗಳಿಗೆ ಸ್ಪಂದಿಸಿ ಉತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸುತ್ತಾ ಕಾರ್ಯ ನಿರ್ವಹಿಸುತ್ತಿದೆ. ನಮ್ಮ ಬ್ಯಾಂಕಿನ 2ನೇ ಶಾಖೆಯು ಶಿವಮೊಗ್ಗ ಜಿಲ್ಲೆ ಭದ್ರಾವತಿ ನಗರದಲ್ಲಿ ದಿನಾಂಕ: 28-02-2013 ರಂದು ಪ್ರಾರಂಭಗೊಂಡು, ಭದ್ರಾವತಿ ನಗರ ಹಾಗೂ ತಾಲ್ಲೂಕಿನ ಜನತೆಯ ಸಹಾಕಾರದಿಂದ ಶಾಖೆಯ ವ್ಯವಹಾರ ವಹಿವಾಟು ಪ್ರಗತಿ ದಾಯಕವಾಗಿ ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳ ಆರ್ಥಿಕ ವ್ಯವಹಾರಗಳಿಗೆ ಸ್ಪಂದಿಸಿ ಉತ್ತಮ ಬ್ಯಾಂಕಿಂಗ್ ಸೇವೆ ಸಲ್ಲಿಸಲು ಸಹಕರಿಸುತ್ತಿದ್ದಾರೆ ಮತ್ತು ದಿನಾಂಕ 30-05-2019 ರಂದು ಭದ್ರಾವತಿ ನಗರದ ಭೂತನಗುಡಿ ಬಡಾವಣೆಯಲ್ಲಿರುವ ನೂತನ ಕಟ್ಟಡಕ್ಕೆ ಭದ್ರಾವತಿ ಶಾಖೆಯ ವ್ಯವಹಾರವನ್ನು ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ನಮ್ಮ ಬ್ಯಾಂಕಿನ 3ನೇ ಶಾಖೆಯು ಶತಮಾನೋತ್ಸವ ಸ್ಮರಣೀಯ ಶಾಖೆಯಾಗಿ ಬೆಂಗಳೂರು ನಗರದ ರಾಜಾಜಿನಗರ, 6ನೇ ಬ್ಲಾಕ್, ಡಾ॥ ರಾಜ್‌ಕುಮಾರ್ ರಸ್ತೆಯಲ್ಲಿ ಸ್ವಂತ ಕಟ್ಟಡದಲ್ಲಿ ದಿನಾಂಕ 14-09-2016 ರಂದು ಪ್ರಾರಂಭಗೊಂಡಿದ್ದು, ಈ ನೂತನ ಶಾಖೆಯ ವ್ಯವಹಾರ ವಹಿವಾಟು ನಡೆಯಲು ಪ್ರೋತ್ಸಾಹಿಸುತ್ತಿರುವ ಎಲ್ಲಾ ಗ್ರಾಹಕರು ಮತ್ತು ಸದಸ್ಯರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.

## ಸದಸ್ಯತ್ವ

ಬ್ಯಾಂಕಿನ ವರ್ಷದ ಪ್ರಾರಂಭದಲ್ಲಿ ನಮ್ಮ ಬ್ಯಾಂಕಿನ ಸದಸ್ಯರ ಸಂಖ್ಯೆ : 2497 ಇದ್ದು, 2024-25ನೇ ಸಾಲಿನಲ್ಲಿ 88 ಜನ ಸದಸ್ಯರುಗಳು ಹೊಸದಾಗಿ ನೊಂದಣಿಯಾಗಿದ್ದು, 188 ಜನ ಸದಸ್ಯತ್ವವನ್ನು ಮುಕ್ತಾಯಗೊಳಿಸಿಕೊಂಡಿರುತ್ತಾರೆ. ವರ್ಷದ ಅಂತ್ಯಕ್ಕೆ ಇದ್ದ ಒಟ್ಟು ಸದಸ್ಯರ ಸಂಖ್ಯೆ : 2397 ಆಗಿರುತ್ತದೆ .

## ಷೇರು ಬಂಡವಾಳ

ವರ್ಷದ ಆರಂಭದಲ್ಲಿ ಷೇರು ಬಂಡವಾಳ ರೂ. 650.74 ಲಕ್ಷಗಳಿದ್ದು, ಈ ವರ್ಷದ ಅಂತ್ಯಕ್ಕೆ ರೂ. 683.38 ಲಕ್ಷಗಳಾಗಿರುತ್ತದೆ.

## ಆಪದ್ಧನ ಮತ್ತು ಇತರೆ ನಿಧಿಗಳು

ವರದಿ ಸಾಲಿನ ಆರಂಭದಲ್ಲಿ ಆಪದ್ಧನ ಹಾಗೂ ಇತರೆ ನಿಧಿಯು ರೂ.1522.27 ಲಕ್ಷಗಳಿದ್ದು, ಪ್ರಸ್ತುತ ಸಾಲಿನ ಅಂತ್ಯಕ್ಕೆ ರೂ. 1247.90 ಲಕ್ಷಗಳಾಗಿರುತ್ತದೆ. ಈ ನಿಧಿಗಳು ಬ್ಯಾಂಕಿನ ಭದ್ರತೆಯ ಸಂಕೇತವನ್ನು ಬಿಂಬಿಸುತ್ತದೆ.

## ಠೇವಣಿಗಳು

ವರದಿ ಸಾಲಿನಲ್ಲಿ ಬ್ಯಾಂಕು ಠೇವಣಿ ಸಂಗ್ರಹಣೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ವರ್ಷದ ಪ್ರಾರಂಭದಲ್ಲಿ ಬ್ಯಾಂಕಿನ ಠೇವಣಿಯು ರೂ. 16718.44 ಲಕ್ಷಗಳಿದ್ದು, ದಿನಾಂಕ : 31-03-2025ರ ಅಂತ್ಯಕ್ಕೆ ರೂ. 17072.34 ಲಕ್ಷಗಳಾಗಿರುತ್ತದೆ. ಠೇವಣಿ ಸಂಗ್ರಹಣೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಶೇ. 2.12 ಉತ್ತಮ ಪ್ರಗತಿಯನ್ನು ಸಾಧಿಸಿದೆ. ಈ ದಿಸೆಯಲ್ಲಿ ಬ್ಯಾಂಕಿನ ಆಡಳಿತ ಮಂಡಳಿಯು ಹಾಕಿಕೊಂಡ ಗುರಿಯನ್ನು ಸಾಧಿಸುವಲ್ಲಿ ಠೇವಣಿದಾರರು ಬ್ಯಾಂಕಿನ ಮೇಲೆ ಇಟ್ಟಿರುವ ವಿಶ್ವಾಸ, ಅಭಿಮಾನ ಹಾಗೂ ನೀಡಿದ ಸಹಕಾರದಿಂದ ನಿಶ್ಚಿತ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿದೆ.

## ಠೇವಣಿ ವಿಮೆ

ಬ್ಯಾಂಕಿನ ಠೇವಣಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಂತ್ರಣದಲ್ಲಿರುವ ಠೇವಣಿ ವಿಮಾ ನಿಗಮದಲ್ಲಿ ಪ್ರೀಮಿಯಂ ಹಣವನ್ನು ಪಾವತಿಸುತ್ತಿದ್ದು, ಇದರಿಂದ ಠೇವಣಿದಾರರು ತೊಡಗಿಸುವ ಠೇವಣಿಗಳಿಗೆ 5.00 ಲಕ್ಷ ರೂಪಾಯಿಗಳವರೆಗಿನ ವಿಮೆ ಸುರಕ್ಷತೆಯಿರುತ್ತದೆ.

## ದುಡಿಯುವ ಬಂಡವಾಳ

ಕಳೆದ 2023-24ರ ಅಂತ್ಯಕ್ಕೆ ದುಡಿಯುವ ಬಂಡವಾಳವು ರೂ. 18891.45 ಲಕ್ಷಗಳಿದ್ದು, ಪ್ರಸ್ತುತ ಸಾಲಿನ ಅಂತ್ಯಕ್ಕೆ ರೂ.19003.63 ಲಕ್ಷಗಳಾಗಿರುತ್ತದೆ. ಶೇ. 1.50 ರಷ್ಟು ಗಮನಾರ್ಹ ಪ್ರಗತಿಯಾಗಿದೆ.

## ಸಾಲ ಮತ್ತು ಮುಂಗಡಗಳು

ಬ್ಯಾಂಕಿನ ಸದಸ್ಯರಿಗೆ ಅವರ ಅಗತ್ಯತೆಗೆ ಹಾಗೂ ನಿಯಮಗಳ ವ್ಯಾಪ್ತಿಯೊಳಗೆ ಸಾಲ ಸೌಲಭ್ಯಗಳನ್ನು

ನೀಡಲಾಗುತ್ತಿದೆ. ಕಳೆದ 2023-24ರ ಅಂತ್ಯಕ್ಕೆ ಸಾಲ ನೀಡಿಕೆಯು ರೂ. 11844.45 ಲಕ್ಷಗಳಿದ್ದು, ವರದಿ ಸಾಲಿನ ಅಂತ್ಯಕ್ಕೆ ರೂ. 11622.30 ಲಕ್ಷಗಳಾಗಿರುತ್ತದೆ.

## ಆದ್ಯತಾ ವಲಯ ಹಾಗೂ ದುರ್ಬಲ ವರ್ಗದ ಸಾಲ

ಜನಸಾಮಾನ್ಯರ ಬಗ್ಗೆ ಸಾಮಾಜಿಕ ಕಳಕಳಿಯನ್ನು ಹೊಂದಿರುವ ನಮ್ಮ ಬ್ಯಾಂಕ್ ವರದಿ ಸಾಲಿನ ಅಂತ್ಯಕ್ಕೆ ನೀಡಿದ ಒಟ್ಟು ಸಾಲ ರೂ. 11622.30 ಲಕ್ಷಗಳು, ಇದರಲ್ಲಿ ರೂ. 11105.17 ಲಕ್ಷಗಳ ಸಾಲವನ್ನು ಆದ್ಯತಾ ವಲಯಕ್ಕೆ ನೀಡಿದ್ದು, ಒಟ್ಟು ಸಾಲದ ಶೇ. 95.55% ಆಗಿರುತ್ತದೆ. ದುರ್ಬಲ ವರ್ಗಕ್ಕೆ ರೂ. 1586.44 ಲಕ್ಷಗಳ ಸಾಲ ನೀಡಿದ್ದು, ಮಹಿಳಾ ವರ್ಗಕ್ಕೆ ರೂ. 1915.25 ಲಕ್ಷಗಳ ಸಾಲ ನೀಡಲಾಗಿರುತ್ತದೆ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ವರ್ಗಕ್ಕೆ ರೂ. 1044.77 ಲಕ್ಷಗಳು ಸಾಲ ನೀಡಲಾಗಿರುತ್ತದೆ.

## ವಸೂಲಾತಿ

ಆಡಳಿತ ಮಂಡಲಿಯ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಒಟ್ಟಾರೆ ಶ್ರಮಿಸಿದ ಫಲವಾಗಿ ಶೇ. 97.43% ರಷ್ಟು ಸಾಲ ವಸೂಲಾತಿಯಲ್ಲಿ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುತ್ತದೆ. ಸದಸ್ಯರಲ್ಲಿ ಕಳಕಳಿಯ ಮನವಿ ಏನೆಂದರೆ ನಿಮ್ಮ ಸಾಲದ ಅಗತ್ಯಗಳನ್ನು ಪೂರೈಸಲು ಬ್ಯಾಂಕ್ ಸದಾ ಸಿದ್ಧವಾಗಿದೆ. ಆದರೆ ಸಾಲ ಪಡೆದವರು ದಯವಿಟ್ಟು ಯಾವ ಕಾರಣಕ್ಕೂ ಸುಸ್ತಿದಾರರಾಗಬೇಡಿ. ಒಂದು ವೇಳೆ ಸುಸ್ತಿದಾರರಾದಲ್ಲಿ ಅಂತಹವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಸಾಲ ವಸೂಲಾತಿಗೆ ಕ್ರಮ ತೆಗೆದುಕೊಳ್ಳುವುದು ಬ್ಯಾಂಕಿನ ಹಿತದೃಷ್ಟಿಯಿಂದ ಆದ್ಯ ಕರ್ತವ್ಯವಾಗಿರುತ್ತದೆ. ಸುಸ್ತಿ ಸಾಲಗಳನ್ನು ಕಡಿಮೆ ಮಾಡಲು ಪರಿಣಾಮಕಾರಿಯಾದ ಕ್ರಮ ಕೈಗೊಳ್ಳಲಾಗುವುದು.

## ಅನುತ್ಪಾದಕ ಆಸ್ತಿಗಳು (ಎನ್. ಪಿ. ಎ)

ಯಾವುದೇ ಬ್ಯಾಂಕಿನ ಉತ್ತಮ ಸ್ಥಿತಿಯನ್ನು ತಿಳಿಯಲು ಅದರ ಅನುತ್ಪಾದಕ ಆಸ್ತಿಯು ಮಾನದಂಡವಾಗಿದೆ. ಈ ವರ್ಷ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿಯು (ಎನ್.ಪಿ.ಎ) ಶೇ. 0.00 ಆಗಿರುತ್ತದೆ. ಆರ್ಥಿಕ ಸಂಕಷ್ಟದ ಸ್ಥಿತಿಯಲ್ಲಿಯೂ ಈ ಸಾಧನೆಗಳಿಸಲು ಪ್ರಮುಖವಾಗಿ ಬ್ಯಾಂಕಿನ ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರ ಪರಿಶ್ರಮ ಪ್ರಮುಖವಾಗಿರುತ್ತದೆ.

## ಹೂಡಿಕೆಗಳು

ಭಾರತೀಯ ರಿಸರ್ವ್ ಬ್ಯಾಂಕಿನ ನಿರ್ದೇಶನಗಳಿಗೆ ಅನುಗುಣವಾಗಿ ಹೂಡಿಕೆಗಳನ್ನು ಮಾಡಲಾಗಿದೆ. ವರದಿ ಸಾಲಿನಲ್ಲಿ ಹೂಡಿಕೆಗಳ ಮೊತ್ತ ರೂ. 4320.19 ಲಕ್ಷಗಳಾಗಿದ್ದು. ಇದರಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳ ಭದ್ರತೆಗಳಲ್ಲಿ ರೂ.3630.78 ಲಕ್ಷಗಳು ಹೂಡಿಕೆಯಾಗಿರುತ್ತದೆ. ನಗದು ಮೀಸಲು (ಸಿ.ಆರ್.ಆರ್) ಮತ್ತು ಶಾಸನ ಬದ್ಧ ಮೀಸಲು (ಎಸ್.ಎಲ್.ಆರ್) ಗಳನ್ನು ಬ್ಯಾಂಕ್ ಭಾರತೀಯ ರಿಸರ್ವ್ ಬ್ಯಾಂಕ್ ನೀತಿ ನಿಯಮದನ್ವಯ ಹೂಡಿಕೆ ಮಾಡಿರುತ್ತದೆ.

## ಲಾಭ ವಿಂಗಡಣೆ

ಪ್ರಸ್ತುತ ವರ್ಷ ಬ್ಯಾಂಕ್ ರೂ. 2,22,42,493.00 ಗಳ ಲಾಭ ಗಳಿಸಿದ್ದು ಇದರಲ್ಲಿ ರೂ. 49,57,000.00 ಗಳಷ್ಟು ಆದಾಯ ತೆರಿಗೆಗೆ ಅವಕಾಶ ಕಲ್ಪಿಸಿದ್ದು, ಡೆಫರ್ ಟ್ಯಾಕ್ಸ್ ರೂ.2,58,771.00 , ಅಮಟೈಸೇಷನ್‌ಗೆ ರೂ 10,38,779.00 ಹಾಗೂ ರೂ. 1,00,000.00 ಗಳನ್ನು ಎನ್‌ಪಿಎ ಗೆ ಅವಕಾಶ ಕಲ್ಪಿಸಿ ನಿವ್ವಳ ರೂ. 1,58,87,943.00 ಗಳ ಲಾಭ ಗಳಿಸಿದೆ. ಪ್ರಸ್ತುತ ಸಾಲಿನ ನಿವ್ವಳ ಲಾಭವನ್ನು ಈ ಕೆಳಗಿನಂತೆ ವಿಂಗಡನೆ ಮಾಡಲು ತಮ್ಮಗಳ ಅನುಮೋದನೆ ಕೋರುತ್ತೇನೆ.

| ಕ್ರ.ಸಂ. | ವಿವರ | ಮೊಬಲಗು | ಲಾಭ ಹಂಚಿಕೆಯ ನಂತರದ ನಿಧಿಗಳ ಮೊತ್ತ ದಿನಾಂಕ 28.06.2025ಕ್ಕೆ ಇದ್ದಂತೆ |
|---|---|---|---|
| 1 | ಮೀಸಲು ನಿಧಿ | 3971986.00 | 55481021.28 |
| 2 | ಸಹಕಾರ ಶಿಕ್ಷಣ ನಿಧಿ | 317759.00 | 317759.00 |
| 3 | ಕಟ್ಟಡ ನಿಧಿ | 1588794.00 | 19047104.73 |
| 4 | ಸಾಮಾನ್ಯ ಕ್ಷೇಮ ನಿಧಿ | 794397.00 | 3742888.00 |
| 5 | ಸಿಬ್ಬಂದಿ ಕ್ಷೇಮ ನಿಧಿ | 1294397.00 | 2112798.00 |
| 6 | ಸದಸ್ಯರುಗಳಿಗೆ ಷೇರು ಡಿವಿಡೆಂಡ್ | 6419543.00 | 6628241.00 |
| 7 | ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ನಿಧಿ | 1501066.88 | 1501066.88 |
| | ಒಟ್ಟು ಮೊತ್ತ ರೂ. | 15887942.88 | 88830878.89 |

ಬ್ಯಾಂಕ್ ಗಳಿಸಿದ ಲಾಭಾಂಶವನ್ನು ಘೋಷಿಸಿದ ದಿನಾಂಕದಿಂದ 3 ವರ್ಷಗಳೊಳಗಾಗಿ ಡಿವಿಡೆಂಡ್‌ನ್ನು ಪಡೆದುಕೊಳ್ಳತಕ್ಕದ್ದು. ನಿಗದಿತ ಅವಧಿಯಲ್ಲಿ ಡಿವಿಡೆಂಡ್ ಪಡೆದುಕೊಳ್ಳದಿದ್ದಲ್ಲಿ ಅಂತಹ ಡಿವಿಡೆಂಡ್ ಮೊಬಲಗನ್ನು ಬ್ಯಾಂಕಿನ ಮೀಸಲು ನಿಧಿಗೆ ವರ್ಗಾಯಿಸಲಾಗುವುದು.

## ಲೆಕ್ಕ ಪರಿಶೋಧನೆ

2024–25ನೇ ಸಾಲಿನ ಲೆಕ್ಕಪತ್ರಗಳನ್ನು ಶ್ರೀ ಬಿ.ಪಿ ಪಾಟೀಲ್ & ಕೊ. ಚಾರ್ಟರ್ಡ್ ಅಕೌಂಟೆಂಟ್ಸ್, ಹಾವೇರಿ ಇವರಿಂದ ಶಾಸನಬದ್ಧ ಲೆಕ್ಕಪರಿಶೋಧನೆ ಆಗಿದ್ದು, ಬ್ಯಾಂಕ್ 'ಎ' ವರ್ಗದ ಆಡಿಟ್ ಶ್ರೇಣಿಯಲ್ಲಿ ಮುಂದುವರೆದಿರುತ್ತದೆ. ಬ್ಯಾಂಕಿನ ಆಂತರಿಕ ಲೆಕ್ಕ ಪರಿಶೋಧನೆ/ ಕನ್‌ಕರೆಂಟ್ ಆಡಿಟ್ ಕಾರ್ಯವನ್ನು ಶ್ರೀ ಕಾರ್ತಿಕ್.ಪಿ ಆಂಡ್ ಕೋ, ಚಾರ್ಟರ್ಡ್ ಅಕೌಂಟೆಂಟ್ಸ್, ಚಿತ್ರದುರ್ಗ ಇವರು ನಿರ್ವಹಿಸಿರುತ್ತಾರೆ.

## ಪರಿವೀಕ್ಷಣೆ

ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿಗಳು ದಿನಾಂಕ:31–03–2024ರ ವರೆಗಿನ ಲೆಕ್ಕಪತ್ರಗಳನ್ನು ಪರಿಶೀಲಿಸಿದ್ದು ಉತ್ತಮ ಕಾರ್ಯನಿರ್ವಹಣೆಯನ್ನು ಮನಗಂಡು ನಮ್ಮ ಬ್ಯಾಂಕನ್ನು ಉತ್ತಮ ಶ್ರೇಣಿಯೆಂದು ಪರಿಗಣಿಸಿರುತ್ತಾರೆಂದು ತಿಳಿಸಲು ಹರ್ಷವೆನಿಸುತ್ತಿದೆ.

## ನಿರ್ದೇಶಕರ ಮಂಡಳಿ ಸಭೆಗಳು

ಆಡಳಿತ ಮಂಡಲಿ ನಿಯಮಿತವಾಗಿ ಪ್ರತಿ ಮಾಸಿಕ ಸಭೆ ಸೇರಿ ಪ್ರಸ್ತುತ ವಾರ್ಷಿಕದಲ್ಲಿ 13 ಸಭೆಗಳನ್ನು ನಡೆಸಿರುತ್ತದೆ. ಬ್ಯಾಂಕಿನ ಕಾರ್ಯಕಲಾಪಗಳು ಸುಗಮವಾಗಿ ನಡೆಸಲು ತಮ್ಮ ಅನುಭವ ಹಾಗೂ ಸಮಯವನ್ನು ಎಲ್ಲ ನಿರ್ದೇಶಕರು ನೀಡಿದ್ದಾರೆ. ಈ ಅವಧಿಯಲ್ಲಿ ನಮ್ಮೊಂದಿಗೆ ಆಡಳಿತ ಮಂಡಲಿಯ ಸಭೆಗಳಲ್ಲಿ ತಮ್ಮ ಉತ್ತಮ ಸಲಹೆಗಳು ಹಾಗೂ ಸೂಚನೆಗಳನ್ನು ನೀಡುತ್ತಿರುವ, ಶ್ರೀ ಎಸ್. ಮೋಹನ್ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ಬ್ಯಾಂಕಿಂಗ್ ವಿಷಯದಲ್ಲಿ ಅನುಭವಿಗಳಾದ ಬ್ಯಾಂಕಿನ ವೃತ್ತಿಪರ ನಿರ್ದೇಶಕರಾದ ಶ್ರೀಮತಿ ನಾಗಲಾಂಬಿಕಾ ಕಲ್ಮಠ್ ನಿವೃತ್ತ ಬ್ಯಾಂಕ್ ವ್ಯವಸ್ಥಾಪಕರವರಿಗೂ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾದ ಎಲ್ಲಾ ನಿರ್ದೇಶಕರುಗಳಿಗೂ ನನ್ನ ಹೃತ್ಪೂರ್ವಕವಾದ ಅಭಿನಂದನೆಗಳು.

## ಉಪ ಸಮಿತಿಗಳು

1) ಬ್ಯಾಂಕ್ ಕಾರ್ಯನಿರ್ವಹಣಾ ಸಮಿತಿ–04, ಲೆಕ್ಕ ಪರಿವೀಕ್ಷಣಾ ಸಮಿತಿ–12, ಸಾಲ ಮಂಜೂರಾತಿ ಸಮಿತಿ 03 ಮತ್ತು ಆಲ್ಕೋ ಕಮಿಟಿ–04, ವಿಶೇಷ ಸಮಿತಿ–02 ಸಭೆಗಳನ್ನು ನಡೆಸಿ ಬ್ಯಾಂಕಿನ ಆರ್ಥಿಕ ತಃಖ್ತೆಗಳನ್ನು ಪರಿಶೀಲಿಸಿರುತ್ತದೆ. ಆಂತರಿಕ ಲೆಕ್ಕ ಪರಿಶೋಧನೆ ವಿವರಗಳನ್ನು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಿರುತ್ತದೆ. ಇದೇ ರೀತಿ ಪ್ರಸ್ತುತ ಸಾಲಿನಲ್ಲಿ ಮಂಜೂರಾತಿ ಸಮಿತಿ ಸಭೆಗಳನ್ನು ನಡೆಸಿ ಸಾಲಗಳನ್ನು ಶೀಘ್ರವಾಗಿ ವಿತರಿಸುವ ಕ್ರಮ ಕೈಗೊಳ್ಳಲಾಗಿರುತ್ತದೆ ಮತ್ತು ಆಲ್ಕೋ ಕಮಿಟಿಯ ಸಭೆಗಳನ್ನು ನಡೆಸಿ ಬ್ಯಾಂಕಿನ ನಿಧಿಗಳ ಲಭ್ಯತೆಗೆ ಅನುಗುಣವಾಗಿ ಹೂಡಿಕೆಗಳಲ್ಲಿ ವಿನಿಯೋಗಿಸುವ ಬಗ್ಗೆ ಸಕಾಲದಲ್ಲಿ ಸೂಕ್ತ ನಿರ್ಣಯ ಕೈಗೊಂಡು ನಿಧಿಗಳ ಬಗ್ಗೆ ನಿರ್ವಹಣೆ ಕಾರ್ಯ ಕೈಗೊಂಡಿರುತ್ತದೆ ಹಾಗೂ ವಿಶೇಷ ಸಮಿತಿ ಸಭೆಗಳನ್ನು ನಡೆಸಿ ನಿರ್ಣಯ ಕೈಗೊಂಡಿರುತ್ತೇವೆ. ಮತ್ತು ಕಾರ್ಯನಿರ್ವಹಣಾ ಸಮಿತಿಯ ಸಭೆಯಲ್ಲಿ ಶ್ರೀ ನಾಗಲಾಂಬಿಕ ಕಲ್ಮಠ್ ನಿವೃತ್ತ ಹಿರಿಯ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಶ್ರೀ ರಮೇಶ್.ಪಿ.ವಿ ನಿವೃತ್ತ ಹಿರಿಯ ವ್ಯವಸ್ಥಾಪಕರು, ಐಎನ್‌ಜಿ ವೈಶ್ಯ ಬ್ಯಾಂಕ್, ಪ್ರತಾಪ ಎನ್. ವಕೀಲರು ಮತ್ತು ನಾಗರಾಜ ಶಾಸ್ತ್ರಿ, ನಿವೃತ್ತ ವ್ಯವಸ್ಥಾಪಕರು, ಎಸ್.ಬಿ.ಐ., ಇವರು ತಮ್ಮ ಸಲಹೆ ಮಾರ್ಗದರ್ಶನ ನೀಡಿ ಬ್ಯಾಂಕಿನ ಅಭಿವೃದ್ಧಿಗೆ ಪೂರಕವಾದ ನಿರ್ಣಯುಗಳನ್ನು ಕೈಗೊಂಡಿರುತ್ತಾರೆ.

## ಸಾಮಾಜಿಕ ಹಾಗೂ ಇತರೆ ಚಟುವಟಿಕೆಗಳು

ನಮ್ಮ ಸಂಸ್ಥೆಯು ಸಹಕಾರ ಬ್ಯಾಂಕ್ ಆಗಿ ಪರಿವರ್ತನೆಗೊಂಡು 26 ವರ್ಷಗಳಾಗಿದ್ದು, ಪ್ರಸ್ತುತ 27 ನೇ ವರ್ಷದ ವಾರ್ಷಿಕ ಮಹಾ ಸಭೆಯನ್ನು ಆಚರಿಸುತ್ತಿದ್ದೇವೆ. ಬ್ಯಾಂಕಿನ ಸದಸ್ಯರ ಹಾಗೂ ಸಾರ್ವಜನಿಕರ ಅಗತ್ಯವಾದ ನೀರಿನ ಸರಬರಾಜಿನ ಉಪಯೋಗಕ್ಕಾಗಿ ಉಚಿತವಾಗಿ ನೀರಿನ ಟ್ಯಾಂಕರ್‌ನ ಸೌಲಭ್ಯ ನೀಡುತ್ತಿದ್ದೇವೆ.



# ಕೃತಜ್ಞತೆಗಳು ಹಾಗೂ ಅಭಿನಂದನೆಗಳು




ನಮ್ಮ ಬ್ಯಾಂಕ್ ಯಶಸ್ಸು ಗಳಿಸುತ್ತಾ ಸಾಗಿದ್ದು, ನಮ್ಮ ಜಿಲ್ಲೆಯ ಗಮನವನ್ನು ಸೆಳೆದು ನೆರೆ ಜಿಲ್ಲೆಗಳಾದ ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿ ಮುನ್ನಡೆಯಲು ಹಲವು ರೀತಿಯಲ್ಲಿ ನಮ್ಮೊಂದಿಗೆ ಸಹಕರಿಸಿದವರಿಗೆ ಈ ಸಂದರ್ಭದಲ್ಲಿ ನಾನು ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಭಾರತೀಯ ರಿಸರ್ವ್ ಬ್ಯಾಂಕಿನ ಅಧಿಕಾರಿ ವರ್ಗದವರಿಗೆ, ರಾಷ್ಟ್ರೀಯ/ರಾಜ್ಯ ಫೆಡರೇಷನ್, ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ, ಜಿಲ್ಲಾ ಸಹಕಾರಿ, ಜಿಲ್ಲಾ ಸಹಕಾರಿ ಯೂನಿಯನ್‌ನ ಅಧಿಕಾರಿಗಳು, ಸಹಕಾರ ಸಂಘಗಳ ಇಲಾಖಾ ಅಧಿಕಾರಿಗಳು, ಸ್ಥಳೀಯ ಬ್ಯಾಂಕುಗಳ ವ್ಯವಸ್ಥಾಪಕರು, ಸ್ಥಳೀಯ ಸಹಕಾರ ಸಂಘಗಳು ಹಾಗೂ ಅವರ ಸಿಬ್ಬಂದಿ ವರ್ಗದವರಿಗೂ ಹಾಗೂ ಲೆಕ್ಕಪರಿಶೋಧಕರಾದ ಶ್ರೀ ಬಿ.ಪಿ.ಪಾಟೀಲ್ & ಕೊ. ಹಾಗೂ ಶ್ರೀ ಕಾರ್ತಿಕ್ ಅಂಡ್ ಕೋ. ರವರಿಗೂ ಸಹ ಹೃತ್ಪೂರ್ವಕವಾದ ಅಭಿನಂದನೆಗಳು.

ನಮಗೆ ಕಾಲಕಾಲಕ್ಕೆ ಸೂಕ್ತ ಸಲಹೆ ಹಾಗೂ ಮಾರ್ಗ ದರ್ಶನಗಳನ್ನು ನೀಡುತ್ತಾ ಬಂದಿರುವ ಇಲಾಖಾಧಿಕಾರಿಗಳಿಗೆ ಹಾಗೂ ಸೌಹಾರ್ದ ಸಂಯುಕ್ತ ಸಹಕಾರಿ ಆಡಳಿತ ಮಂಡಳಿ ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದವರಿಗೂ ಹಾಗೂ ಸಿಬ್ಬಂದಿಯವರಿಗೂ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ನಮ್ಮೆಲ್ಲಾ ಕಾರ್ಯಗಳಲ್ಲಿ, ತಮ್ಮಗಳ ಸಂಪೂರ್ಣ ಸಹಕಾರ ಹಾಗೂ ಒಮ್ಮತ ನಿರ್ಣಯಗಳನ್ನು ನೀಡಿ ಬ್ಯಾಂಕಿನ ಅಭಿವೃದ್ದಿಯೇ, ತಮ್ಮ ಅಭಿವೃದ್ಧಿ ಎಂದು ಕಾಣುತ್ತಾ ಕಾರ್ಯಗಳನ್ನು ಮಾಡುತ್ತಿರುವ ಬ್ಯಾಂಕಿನ ಆಡಳಿತ ಮಂಡಲಿಯ ನನ್ನ ಮಿತ್ರರು ಹಾಗೂ ಯಾವುದೇ ಸಂದರ್ಭದಲ್ಲಿ ಬೇಸರಿಸದೇ ಸದಾ ನಗುಮುಖದ ಸೇವೆ ನೀಡುತ್ತಾ ಬರುತ್ತಿರುವ ಎಲ್ಲಾ ಸಿಬ್ಬಂದಿಯವರಿಗೆ ವಿಶೇಷವಾದ ಅಭಿನಂದನೆಗಳು.

ನಮ್ಮ ಬ್ಯಾಂಕಿನ ಸದಸ್ಯರು ಹಾಗೂ ಗ್ರಾಹಕರ ಅನುಕೂಲಕ್ಕಾಗಿ ಆರ್.ಟಿ.ಜಿ.ಎಸ್., ಎನ್.ಇ.ಎಫ್.ಟಿ., ಐ.ಎಮ್.ಪಿ.ಎಸ್., ಯು.ಪಿ.ಐ. ಸೌಲಭ್ಯ ಕಲ್ಪಿಸಿಕೊಟ್ಟಿರುವ ಚಿತ್ರದುರ್ಗ ಶಾಖೆಯ ಆಕ್ಸಿಸ್ ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಅಧಿಕಾರಿ ವರ್ಗದವರಿಗೂ ಮತ್ತು ಕಡೂರು ಶಾಖೆಯ ಆಕ್ಸಿಸ್ ಬ್ಯಾಂಕಿನ ವ್ಯವಸ್ಥಾಪಕರಿಗೆ ಹಾಗೂ ಅಧಿಕಾರಿ ವರ್ಗದವರಿಗೆ, ಭದ್ರಾವತಿ ಹಾಗೂ ಬೆಂಗಳೂರು ಶಾಖೆಯ ಆಕ್ಸಿಸ್ ಬ್ಯಾಂಕಿನ ವ್ಯವಸ್ಥಾಪಕರು ಹಾಗೂ ಅಧಿಕಾರಿ ವರ್ಗದವರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು.

ಮುಖ್ಯವಾಗಿ ನಮ್ಮ ಬ್ಯಾಂಕ್‌ನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸುತ್ತಿರುವ ಬ್ಯಾಂಕಿನ ಗ್ರಾಹಕರಿಗೆ, ಸದಸ್ಯರುಗಳಿಗೆ ಹಾಗೂ ಮಾಧ್ಯಮ ಪ್ರತಿನಿಧಿಗಳಿಗೆ ಮತ್ತು ನಮ್ಮ ಬ್ಯಾಂಕಿನ ಶಾಖೆಯು ಚಿಕ್ಕಮಗಳೂರು ಜಿಲ್ಲೆ, ಕಡೂರು ನಗರದಲ್ಲಿ ಹಾಗೂ ಶಿವಮೊಗ್ಗ ಜಿಲ್ಲೆ ಭದ್ರಾವತಿಯಲ್ಲಿ ಮತ್ತು ಬೆಂಗಳೂರಿನ ರಾಜಾಜಿನಗರದಲ್ಲಿ ಪ್ರಾರಂಭಗೊಂಡು, ಈ ಶಾಖೆಗಳು ಉತ್ತಮ ಪ್ರಗತಿ ಹೊಂದುತ್ತಿರಲು ಸಹಕರಿಸುತ್ತಿರುವ ಅಲ್ಲಿನ ಗ್ರಾಹಕರು ಹಾಗೂ ಸದಸ್ಯರುಗಳಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ತಮ್ಮೆಲ್ಲರ ಪ್ರೋತ್ಸಾಹ ನಮ್ಮ ಮೇಲೆ ಸದಾಕಾಲ ಇರಲಿ ಎಂದು ಆಶಿಸಿ, ವಿನಯಪೂರ್ವಕವಾಗಿ ವಂದಿಸಿ, ನನ್ನ ವರದಿಯನ್ನು ಪೂರ್ಣಗೊಳಿಸುತ್ತೇನೆ.

ಕಾರ್ಯಕಾರಿ ಮಂಡಲಿ ಪರವಾಗಿ,
(ಹಂಜಿ ಶಿವಸ್ವಾಮಿ),
ಅಧ್ಯಕ್ಷರು

**ಸಹಕಾರಿ ವಂದನೆಗಳು**

## 2025–26ನೇ ಸಾಲಿನ ಅಂದಾಜು ಆಯ–ವ್ಯಯದ ಪಟ್ಟಿ

| ಕ್ರ.ಸಂ. | ವಿವರ | 2025-26 | |
|---|---|---|---|
| | | ಆದಾಯ | ಖರ್ಚು |
| 1 | ಬಡ್ಡಿ, ಸುಸ್ತಿಬಡ್ಡಿ, ಬ್ಯಾಂಕಿನ ವ್ಯವಹಾರದಿಂದ ಬರಬಹುದಾದ ಆದಾಯ | 165500000.00 | 109000000.00 |
| 2 | ಹೂಡಿಕೆ ಮೇಲೆ ಬರಬಹುದಾದ ಬಡ್ಡಿ | 4000000.00 | 0.00 |
| 3 | ಸರ್ಕಾರಿ ಭದ್ರತೆಗಳಿಂದ ಬರಬಹುದಾದ ಆದಾಯ | 29000000.00 | 0.00 |
| 4 | ಲಾಕರ್ ಬಾಡಿಗೆ | 720000.00 | 0.00 |
| 5 | ಬ್ಯಾಂಕ್ ಚಾರ್ಜಸ್ | 0.00 | 50000.00 |
| 6 | ಪಿಗ್ಮಿ ಕಮಿಷನ್ | 0.00 | 4000000.00 |
| 7 | ವಾಹನ ನಿರ್ವಹಣಾ ವೆಚ್ಚ | 0.00 | 800000.00 |
| 8 | ಠೇವಣಿ ಮೇಲಿನ ವಿಮೆ | 0.00 | 2250000.00 |
| 9 | ಕಛೇರಿ ವಿಮೆ | 0.00 | 400000.00 |
| 10 | ವಾಹನ ವಿಮೆ | 0.00 | 150000.00 |
| 11 | ಬ್ಯಾಂಕಿನ ವೃತ್ತಿ ತೆರಿಗೆ | 0.00 | 10000.00 |
| 12 | ವ್ಯವಹಾರಾಭಿವೃದ್ಧಿಗಾಗಿ ಖರ್ಚು | 0.00 | 1000000.00 |
| 13 | ಸಿಬ್ಬಂದಿ ಸಂಬಳ, ಭವಿಷ್ಯನಿಧಿ, ವೈದ್ಯಕೀಯ ಭತ್ಯೆ ಗ್ರಾಚ್ಯುಯಿಟಿ, ಬೋನಸ್ / ಎಕ್ಸ್‌ಗ್ರೇಷಿಯಾ | 0.00 | 34000000.00 |
| 14 | ಮುದ್ರಣ ಮತ್ತು ಲೇಖನ | 0.00 | 500000.00 |
| 15 | ದೂರವಾಣಿ ಶುಲ್ಕ | 0.00 | 800000.00 |
| 16 | ನಿರ್ದೇಶಕ ಮಂಡಲಿ & ಕಾರ್ಯನಿರ್ವಹಣಾ ಸಮಿತಿಯ(BOM)ಸಿಟ್ಟಿಂಗ್ ಫೀ | 0.00 | 900000.00 |
| 17 | ಮಾಸಿಕ ಸಭಾ ಖರ್ಚು | 0.00 | 100000.00 |
| 18 | ಕಾನೂನು ಸಲಹಾ/ವೃತ್ತಿ ಶುಲ್ಕ | 0.00 | 700000.00 |
| 19 | ವಿದ್ಯುಚ್ಛಕ್ತಿ ಬಿಲ್ಲು | 0.00 | 1200000.00 |
| 20 | ಪತ್ರಿಕೆ ಮತ್ತು ನಿಯತಕಾಲಿಕೆಗಳು | 0.00 | 100000.00 |
| 21 | ಪ್ರಯಾಣ ಭತ್ಯೆ & ದಿನಭತ್ಯೆ | 0.00 | 400000.00 |
| 22 | ಸಿಬ್ಬಂದಿ & ಕಾರ್ಯಕಾರಿ ಮಂಡಲಿಯ ತರಬೇತಿ ಹಾಗೂ ಅಧ್ಯಯನದ ಖರ್ಚು | 0.00 | 200000.00 |

## 2025–26ನೇ ಸಾಲಿನ ಅಂದಾಜು ಆಯ–ವ್ಯಯದ ಪಟ್ಟಿ

| | | | |
|---|---|---|---|
| 23 | ಅಂಚೆ ವೆಚ್ಚ | 0.00 | 80000.00 |
| 24 | ವಾರ್ಷಿಕ ಮಹಾಸಭಾ ಖರ್ಚು | 0.00 | 1600000.00 |
| 25 | ಪ್ರಚಾರದ ಖರ್ಚು | 0.00 | 500000.00 |
| 26 | ಕಟ್ಟಡ & ನೀರಿನ ತೆರಿಗೆ & ಇತರೆ ಖರ್ಚುಗಳು | 0.00 | 200000.00 |
| 27 | ವಾರ್ಷಿಕ ನಿರ್ವಹಣಾ ವೆಚ್ಚ | 0.00 | 300000.00 |
| 28 | ರಾಷ್ಟ್ರೀಯ ಫೆಡರೇಷನ್ / ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ / ಸೌಹಾರ್ದ ಸಹಕಾರಿ ನಿ., & ಜಿಲ್ಲಾ ಯೂನಿಯನ್ ಸದಸ್ಯತ್ವ ಶುಲ್ಕ | 0.00 | 150000.00 |
| 29 | ಸಾಮಾನ್ಯ ಖರ್ಚು | 0.00 | 700000.00 |
| 30 | ಕ್ರೀಡಾ & ಸಾಂಸ್ಕೃತಿಕ ಚಟುವಟಿಕೆಗಳ ಖರ್ಚು | 0.00 | 100000.00 |
| 31 | ದಾನ / ವಂತಿಗೆ | 0.00 | 181000.00 |
| 32 | ಲೆಕ್ಕಪರಿಶೋಧನಾ ಶುಲ್ಕ ಮತ್ತು ಲೆಕ್ಕಪರಿಶೋಧಕರ ಖರ್ಚು | 0.00 | 1000000.00 |
| 33 | ರಿಪೇರಿ ಮತ್ತು ನಿರ್ವಹಣೆ | 0.00 | 1000000.00 |
| 34 | ಸವಕಳಿ | 0.00 | 7000000.00 |
| 35 | ಅತಿಥಿ ಸತ್ಕಾರದ ಖರ್ಚು | 0.00 | 800000.00 |
| 36 | ಸಿಬ್ಬಂದಿ ಸಮವಸ್ತ್ರ | 0.00 | 150000.00 |
| 37 | ಆದಾಯ ತೆರಿಗೆ | 0.00 | 6000000.00 |
| 38 | ಅಮರ್ಟೈಸೇಷನ್ | 0.00 | 1100000.00 |
| 39 | ಗೋದಾಮು ಬಾಡಿಗೆ | 0.00 | 75000.00 |
| 40 | ಎ.ಟಿ.ಎಂ. ನಿರ್ವಹಣಾ ವೆಚ್ಚ | 0.00 | 800000.00 |
| 41 | ಅನುತ್ಪಾದಕ ಆಸ್ತಿ ಅವಕಾಶ (ಎನ್.ಪಿ.ಎ.) | 0.00 | 2500000.00 |
| 42 | ಯು.ಪಿ.ಐ., ಐ.ಎಂ.ಪಿ.ಎಸ್., ಸಿಬಿಲ್ ಚಾರ್ಜಸ್ ಮತ್ತು ಇತರೆ | 0.00 | 200000.00 |
| 43 | ಲಾಭಾಂಶ | 0.00 | 18224000.00 |
| | **ಒಟ್ಟು ಮೊತ್ತ** | **199220000.00** | **199220000.00** |

# M/S. B. P. PATIL & CO.

Chartered Accountants

3RD CROSS, SHIVAJI NAGAR, **HAVERI** - 581 110. Mobile:9686233662,
Email: bppatilandcompany@gmail.com

## ಲೆಕ್ಕ ಪರಿಶೋಧಕರ ವರದಿ

ಸದಸ್ಯರು,
**ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ,**
**ಹೊಸದುರ್ಗ** ಇವರಿಗೆ,

ನಾವು ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ, ಹೊಸದುರ್ಗ, ಇದರ 31 ಮಾರ್ಚ್, 2025 ರಲ್ಲಿದ್ದಂತೆ ಆಸ್ತಿ–ಜವಾಬ್ದಾರಿ ತಃಖ್ತೆಯನ್ನು ಮತ್ತು ಮೇಲ್ಕಂಡ ದಿನಾಂಕಕ್ಕೆ ಅಂತ್ಯಗೊಳ್ಳುವ ಆರ್ಥಿಕ ವರ್ಷದ ಜಮಾ ಮತ್ತು ಖರ್ಚು ತಃಖ್ತೆಯನ್ನು ಪರಿಶೋಧಿಸಿರುತ್ತೇವೆ. ಈ ಆರ್ಥಿಕ ವಿವರಣೆಗಳು ಸಹಕಾರಿಯ ಆಡಳಿತ ಮಂಡಲಿಯ ಜವಾಬ್ದಾರಿಯಾಗಿರುತ್ತದೆ. ಲೆಕ್ಕ ಪರಿಶೋಧನೆಯ ಆಧಾರದಲ್ಲಿ ಸಹಕಾರಿಯ ಆರ್ಥಿಕ ತ:ಖ್ತೆಗಳ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮ ಜವಾಬ್ದಾರಿಯಾಗಿರುತ್ತದೆ.

ಪ್ರಸಕ್ತ ನಮ್ಮ ದೇಶದಲ್ಲಿ ಪ್ರಚಲಿತವಿರುವ ಲೆಕ್ಕ ಪರಿಶೋಧನಾ ಮಾನದಂಡಗಳಿಗನುಗುಣವಾಗಿ ನಾವು ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇವೆ. ಸದರಿ ಮಾನದಂಡಗಳು ಸಹಕಾರಿಯ ಆರ್ಥಿಕ ತಃಖ್ತೆಗಳು ಮಹತ್ವದ ತಪ್ಪು ವಿವರಣೆಗಳಿಂದ ಮುಕ್ತವಾಗಿವೆ ಎಂಬ ಸಮಂಜಸ ಭರವಸೆಯನ್ನು ಹೊಂದುವಂತೆ ನಾವು ಲೆಕ್ಕ ಪರಿಶೋಧನೆಯನ್ನು ಯೋಜಿಸಿ ನಿರ್ವಹಿಸಲು ಅಪೇಕ್ಷಿಸುತ್ತವೆ. ಲೆಕ್ಕ ಪರಿಶೋಧನೆಯು ಆರ್ಥಿಕ ಅಂಶಗಳನ್ನು ಸಮರ್ಥಿಸುವ ಪುರಾವೆಗಳ ಪರೀಕ್ಷಾರ್ಥ ಪರಿಶೀಲನೆಯನ್ನು ಒಳಗೊಂಡಿರುತ್ತದೆ. ಮತ್ತು ಲೇಖಾನುದಾನ ತತ್ವಗಳು ಮತ್ತು ಆಡಳಿತ ಮಂಡಳಿಯವರು ಕೈಗೊಂಡ ಮಹತ್ವದ ನಿರ್ಧಾರಗಳು ಸೇರಿದಂತೆ ಆರ್ಥಿಕ ವರದಿಗಳ ಸಮಗ್ರ ಮೌಲೀಕರಣವನ್ನು ಒಳಗೊಂಡಿರುತ್ತದೆ. ನಮ್ಮ ಲೆಕ್ಕ ಪರಿಶೋಧನೆಯು ನಮ್ಮ ಅಭಿಪ್ರಾಯಗಳಿಗೆ ಸೂಕ್ತವಾದ ಆಧಾರಗಳನ್ನು ಒದಗಿಸುತ್ತದೆಂದು ನಾವು ನಂಬುತ್ತೇವೆ.

ಸಹಕಾರಿಯ ಲೆಕ್ಕಪತ್ರಗಳನ್ನು ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ 1997, ಇದರ ನಿಯಮಾವಳಿಗಳಿಗೆ ಅನುಗುಣವಾಗಿ ನಿರ್ವಹಿಸಲಾಗಿದೆ. ಹಾಗೂ ಇವು ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕೃತವಾದ ನಿಯಮಾವಳಿಗಳಿಗೆ ಅನುಗುಣವಾಗಿರುತ್ತವೆ.

ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ಸಮಜಾಯಿಷಿಗಳ ಆಧಾರದ ಮೇರೆಗೆ ಈ ರೀತಿ ವರದಿ ಮಾಡುತ್ತಿದ್ದೇವೆ.

1. ನಾವು ಲೆಕ್ಕ ಪರಿಶೋಧನೆಯ ಉದ್ದೇಶಕ್ಕಾಗಿ ನಮ್ಮ ಬಹುಮಟ್ಟಿನ ತಿಳುವಳಿಕೆ ಮತ್ತು ನಂಬಿಕೆ ಮೇರೆಗೆ ಅಗತ್ಯವಾದ ಎಲ್ಲಾ ಮಾಹಿತಿಗಳನ್ನು ಪಡೆದಿರುತ್ತೇವೆ.
2. ನಮ್ಮ ಅಭಿಪ್ರಾಯದಂತೆ ಸಹಕಾರಿಯು ಲೆಕ್ಕ ಪತ್ರಗಳನ್ನು ಕಾನೂನಿನ ಅನ್ವಯ ಇರಿಸಿರುತ್ತದೆಂದು ನಮ್ಮ ಪರಿಶೀಲನೆಯಿಂದ ತಿಳಿದುಬಂದಿರುತ್ತದೆ.
3. ಈ ವರದಿಯಲ್ಲಿ ತಿಳಿಸಿರುವಂತೆ ಜಮಾ ಮತ್ತು ಖರ್ಚು ತಃಖ್ತೆಯು ಹಾಗೂ ಆಸ್ತಿ ಜವಾಬ್ದಾರಿ ತಃಖ್ತೆಯು ಸಹಕಾರಿಯ ಲೆಕ್ಕ ಪತ್ರಗಳಿಗೆ ಮತ್ತು ವರದಿಗೆ ತಾಳೆಯಾಗುತ್ತದೆ.
4. ನಮ್ಮ ಗಮನಕ್ಕೆ ಬಂದಿರುವಂತೆ ಸಹಕಾರಿಯ ವ್ಯವಹಾರವು ಸಹಕಾರಿಯ ಸಾಮರ್ಥ್ಯದ ವ್ಯಾಪ್ತಿಯಲ್ಲಿದೆ.
5. **ಗಮನಕ್ಕೆ :**

   ಲೆಕ್ಕ ಪತ್ರಗಳ ಮತ್ತು ಟೀಕೆ ಹಾಗೂ ಅವಲೋಕನಗಳ ಟಿಪ್ಪಣಿಯ ಅಂಶ ಲೆಕ್ಕ ಪರಿಶೋಧನೆಯ ದಸ್ತಾವೇಜಿನಲ್ಲಿ ಸೇರಿದೆ. ನಮ್ಮ ಅಭಿಪ್ರಾಯ ಮತ್ತು ನಮಗೆ ನೀಡಿದ ಮಾಹಿತಿಯ ಆಧಾರದನ್ವಯ ಮೇಲೆ ತಿಳಿಸಿದ ಲೆಕ್ಕ ಪತ್ರಗಳು, ಟಿಪ್ಪಣಿಗಳು, ಸತ್ಯವೂ ಮತ್ತು ನೈಜವೂ ಆಗಿವೆ.

ಎ) ಆಸ್ತಿ ಜವಾಬ್ದಾರಿ ತಃಖ್ತೆಯು ದಿನಾಂಕ 31 ಮಾರ್ಚ್, 2025ಕ್ಕೆ ಇದ್ದಂತೆ ಸಂಯುಕ್ತ ಸಹಕಾರಿಯ ವಾಸ್ತವ ಸ್ಥಿತಿಯಾಗಿದೆ.

ಬಿ) ಆದಾಯ ಮತ್ತು ವೆಚ್ಚಕ್ಕೆ ಸಂಬಂಧಿಸಿದಂತೆ, ಬ್ಯಾಂಕಿನ ಆದಾಯವು ವರ್ಷಾಂತ್ಯಕ್ಕೆ ವೆಚ್ಚಕ್ಕೆ ಮೀರಿದ ಆದಾಯವಾಗಿದೆ.

**ದಿನಾಂಕ: 23.06.2025**
**ಸ್ಥಳ: ಹೊಸದುರ್ಗ**

**ಎಂಪಾನಲ್‌ಮೆಂಟ್ ನಂಬರ್: F-29/05/2024-17:36:38**

**ಇಂದಾ:– ಬಿ.ಪಿ.ಪಾಟೀಲ್ ಅಂಡ್ ಕೋ,**
**ಚಾರ್ಟರ್ಡ್ ಅಕೌಂಟೆಂಟ್ಸ್**
**ಫರ್ಮ್ ಸಂಖ್ಯೆ 002605S**
**ಬಿ.ಪಿ. ಪಾಟೀಲ್ ಮೆ.ನಂ. 026911**

# ಇದರ 2024-25ನೇ ಸಾಲಿನ ಲಾಭ-ನಷ್ಟದ ತಃಖ್ತೆ

| ದಿನಾಂಕ : 31.03.2024ಕ್ಕೆ ಇದ್ದಂತೆ | ಆದಾಯ | ದಿನಾಂಕ : 31.03.2025ಕ್ಕೆ ಇದ್ದಂತೆ |
|---|---|---|
| 17,57,46,805.00 | ಸಾಲಗಳಿಂದ ಬಂದ ಬಡ್ಡಿ | 17,76,19,530.00 |
| 64,52,801.00 | ಇತರೆ ಆದಾಯ | 67,57,88.00 |
| **18,21,98,976.00** | **ಒಟ್ಟು ಮೊತ್ತ** | **18,43,73,318.00** |
| | **ಖರ್ಚು** | |
| 10,46,85,308.00 | ನೀಡಿದ ಬಡ್ಡಿ | 10,32,74,437.00 |
| 5,53,93,057.00 | ಕಾರ್ಯಾಚರಣೆ ವೆಚ್ಚಗಳು | 5,25,01,838.00 |
| 66,51,473.00 | ಅವಕಾಶಗಳು & ಆಕಸ್ಮಿಕ ಅವಕಾಶಗಳು | 63,54,550.00 |
| **16,67,29,838.00** | **ಒಟ್ಟು ಮೊತ್ತ** | **16,21,30,825.00** |
| | **ಲಾಭ/ನಷ್ಟ** | |
| **1,54,69,138.00** | ನಿವ್ವಳ ಲಾಭ / ನಷ್ಟ ಚಾಲ್ತಿ ಸಾಲಿಗೆ | **1,58,87,943.00** |
| | ಲಾಭ/ನಷ್ಟ ಮುಂದೆ ತಂದಿದ್ದು | |
| **18,21,98,976.00** | **ಒಟ್ಟು ಮೊತ್ತ** | **18,43,73,318.00** |

**ದಿನಾಂಕ : 23-06-2025**
**ಸ್ಥಳ : ಹೊಸದುರ್ಗ**

ಇಂದಾ:- ಬಿ.ಪಿ.ಪಾಟಿಲ್ ಅಂಡ್ ಕೋ,
ಚಾರ್ಟರ್ಡ್ ಅಕೌಂಟೆಂಟ್ಸ್
ಫರ್ಮ್ ಸಂಖ್ಯೆ 002605S

| | | | | | |
|---|---|---|---|---|---|
| (ಹಂಜಿ ಶಿವಸ್ವಾಮಿ) ಅಧ್ಯಕ್ಷರು | (ಡಿ. ಆದಿರಾಜಯ್ಯ) ಉಪಾಧ್ಯಕ್ಷರು | (ಬಿ.ವಿ. ಕುಶಕುಮಾರ್) ನಿರ್ದೇಶಕರು | (ಗುರುಮೂರ್ತಿ ಟಿ.ಎನ್.) ನಿರ್ದೇಶಕರು | (ಎನ್. ಮಂಜುನಾಥ) ಪ್ರಧಾನ ವ್ಯವಸ್ಥಾಪಕರು | ಬಿ.ಪಿ. ಪಾಟೀಲ್ ಮೆ.ನಂ. 026911 |

# ಇದರ ಆಸ್ತಿ-ಜವಾಬ್ದಾರಿ ತಃಖ್ತೆ ದಿನಾಂಕ: 31.03.2025 ಕ್ಕೆ ಇದ್ದಂತೆ

| ದಿನಾಂಕ : 31.03.2024ಕ್ಕೆ ಇದ್ದಂತೆ | ಬಂಡವಾಳ ಮತ್ತು ಹೊಣೆಗಾರಿಕೆಗಳು | ಅನುಬಂಧ | ದಿನಾಂಕ : 31.03.2025ಕ್ಕೆ ಇದ್ದಂತೆ |
|---|---|---|---|
| 6,50,73,500.00 | ಷೇರು ಬಂಡವಾಳ | 1 | 6,83,38,400.00 |
| 15,22,27,781.00 | ಆಪದ್ಧನ ಮತ್ತು ಇತರೆ ನಿಧಿಗಳು | 2 | 12,47,90,986.00 |
| 167,18,43,959.00 | ಠೇವಣಾತಿಗಳು | 4 | 1,70,72,34,012.00 |
| 0.00 | ಪಡೆದಿರುವ ಸಾಲಗಳು | 5 | .00 |
| 2,60,32,411.00 | ಬರತಕ್ಕ ಸುಸ್ತಿ ಬಡ್ಡಿ | 8 | 2,17,97,221.00 |
| 1,19,07,160.00 | ಪಾವತಿಸಬೇಕಾದ ಬಡ್ಡಿ | 9 | 1,00,58,475.00 |
| 1,93,28,362.00 | ಇತರೆ ಹೊಣೆಗಾರಿಕೆಗಳು | 10 | 5,11,29,173.00 |
| 1,54,69,138.00 | ಲಾಭಾಂಶ | 11 | 1,58,87,943.00 |
| **196,18,82,311.00** | ಒಟ್ಟು ಮೊತ್ತ | | **1,99,92,36,210.00** |
| | **ಸ್ವತ್ತು ಮತ್ತು ಆಸ್ತಿ** | | |
| 3,01,31,195.00 | ನಗದು ಮತ್ತು ಭಾರತೀಯ ರಿಸರ್ವ್ ಬ್ಯಾಂಕ್‌ನಲ್ಲಿ ಶಿಲ್ಕು | 1 | 3,08,23,107.00 |
| 15,83,81,867.00 | ಬ್ಯಾಂಕುಗಳಲ್ಲಿ ಶಿಲ್ಕು, ಕಾಲ್ ಮನಿ ಇತರೆ | 2 | 23,61,79,070.00 |
| 37,91,82,441.00 | ಹೂಡಿಕೆಗಳು | 4 | 36,30,98,662.00 |
| 118,44,44,684.00 | ಸಾಲ ಮತ್ತು ಮುಂಗಡಗಳು | 6 | 1,16,22,29,558.00 |
| 2,60,32,411.00 | ಬರತಕ್ಕ ಬಡ್ಡಿ | 7 | 2,57,24,512.00 |
| 16,21,49,711.00 | ಸ್ಥಿರಾಸ್ತಿಗಳು | 10 | 15,70,53,655.00 |
| 2,15,60,002.00 | ಇತರೆ ಆಸ್ತಿಗಳು | 11 | 2,41,27,646.00 |
| **196,18,82,311.00** | **ಒಟ್ಟು ಮೊತ್ತ** | | **1,99,92,36,210.00** |

**ದಿನಾಂಕ : 23-06-2025**
**ಸ್ಥಳ : ಹೊಸದುರ್ಗ**

(ಹಂಜಿ ಶಿವಸ್ವಾಮಿ) ಅಧ್ಯಕ್ಷರು
(ಡಿ. ಆದಿರಾಜಯ್ಯ) ಉಪಾಧ್ಯಕ್ಷರು
(ಬಿ.ವಿ. ಕುಶಕುಮಾರ್) ನಿರ್ದೇಶಕರು
(ಗುರುಮೂರ್ತಿ ಟಿ.ಎನ್.) ನಿರ್ದೇಶಕರು
(ಎನ್. ಮಂಜುನಾಥ) ಪ್ರಧಾನ ವ್ಯವಸ್ಥಾಪಕರು

ಇಂದಾ:- ಬಿ.ಪಿ.ಪಾಟಿಲ್ ಅಂಡ್ ಕೋ,
ಚಾರ್ಟರ್ಡ್ ಅಕೌಂಟೆಂಟ್ಸ್
ಫರ್ಮ್ ಸಂಖ್ಯೆ 002605S
ಬಿ.ಪಿ. ಪಾಟೀಲ್ ಮೆ.ನಂ. 026911

## 2024-25ನೇ ಸಾಲಿನ ಅಂದಾಜು ಆಯ-ವ್ಯಯದ ಮರುಹೊಂದಾಣಿಕೆ ಪಟ್ಟಿ.

| ಕ್ರ.ಸಂ. | ವಿವರ | ಮಂಜೂರಾದ ಮೊಬಲಗು | ಖರ್ಚಾದ ಮೊಬಲಗು | ಹೆಚ್ಚುವರಿ ಖರ್ಚು | ಉಳಿತಾಯ |
|---|---|---|---|---|---|
| 1 | ಬಡ್ಡಿ, ಸುಸ್ತಿಬಡ್ಡಿ, ಬ್ಯಾಂಕಿನ ವ್ಯವಹಾರದಿಂದ ಬರಬಹುದಾದ ಆದಾಯ | 105000000.00 | 103274437.00 | 0.00 | 1725563.00 |
| 2 | ಬ್ಯಾಂಕ್ ಚಾರ್ಜಸ್ | 50000.00 | 30708.43 | 0.00 | 19291.57 |
| 3 | ಪಿಗ್ಮಿ ಕಮಿಷನ್ | 3500000.00 | 3465020.00 | 0.00 | 34980.00 |
| 4 | ವಾಹನ ನಿರ್ವಹಣಾ ವೆಚ್ಚ | 600000.00 | 748925.00 | 148925.00 | 0.00 |
| 5 | ಠೇವಣಿ ಮೇಲಿನ ವಿಮೆ | 2000000.00 | 2009264.00 | 9264.00 | 0.00 |
| 6 | ಕಛೇರಿ ವಿಮೆ | 300000.00 | 318185.92 | 18185.92 | 0.00 |
| 7 | ವಾಹನ ವಿಮೆ | 100000.00 | 69469.00 | 0.00 | 30531.00 |
| 8 | ಬ್ಯಾಂಕಿನ ವೃತ್ತಿ ತೆರಿಗೆ | 10000.00 | 10000.00 | 0.00 | 0.00 |
| 9 | ವ್ಯವಹಾರಾಭಿವೃದ್ಧಿಗಾಗಿ ಖರ್ಚು | 2000000.00 | 655650.00 | 0.00 | 1344350.00 |
| 10 | ಸಿಬ್ಬಂದಿ ಸಂಬಳ, ಭವಿಷ್ಯನಿಧಿ, ವೈದ್ಯಕೀಯ ಭತ್ಯೆ, ಗ್ರಾಚ್ಯುಯಿಟಿ, ಬೋನಸ್ / ಎಕ್ಸ್‌ಗ್ರೇಷಿಯಾ ಇತ್ಯಾದಿ | 30000000.00 | 32563961.00 | 2563961.00 | 0.00 |
| 11 | ಮುದ್ರಣ ಮತ್ತು ಲೇಖನ | 200000.00 | 464046.00 | 264046.00 | 0.00 |
| 12 | ದೂರವಾಣಿ ಶುಲ್ಕ | 800000.00 | 656425.40 | 0.00 | 143575.00 |
| 13 | ನಿರ್ದೇಶಕ ಮಂಡಲಿ ಸಿಟ್ಟಿಂಗ್ ಫೀ | 1200000.00 | 731500.00 | 0.00 | 468500.00 |
| 14 | ವ್ಯವಸ್ಥಾಪಕ ನಿರ್ದೇಶಕರ ಸಂಭಾವನೆ | 960000.00 | 0.00 | 0.00 | 960000.00 |
| 15 | ಮಾಸಿಕ ಸಭಾ ಖರ್ಚು | 100000.00 | 53500.00 | 0.00 | 46500.00 |
| 16 | ಸೇವಾ ತೆರಿಗೆ, ಆದಾಯ ತೆರಿಗೆ & ವೃತ್ತಿ ತೆರಿಗೆ ಫೈಲಿಂಗ್ ಶುಲ್ಕ | 200000.00 | 610821.00 | 410821.00 | 0.00 |
| 17 | ವಿದ್ಯುಚ್ಛಕ್ತಿ ಬಿಲ್ಲು | 1200000.00 | 1043465.40 | 0.00 | 156534.60 |
| 18 | ಪತ್ರಿಕೆ ಮತ್ತು ನಿಯತಕಾಲಿಕೆಗಳು | 100000.00 | 89013.00 | 0.00 | 10987.00 |
| 19 | ಪ್ರಯಾಣ ಭತ್ಯೆ & ದಿನಭತ್ಯೆ | 300000.00 | 293366.00 | 0.00 | 6634.00 |
| 20 | ಸಿಬ್ಬಂದಿ & ಕಾರ್ಯಕಾರಿ ಮಂಡಲಿಯ ತರಬೇತಿ ಹಾಗೂ ಅಧ್ಯಯನದ ಖರ್ಚು | 200000.00 | 0.00 | 0.00 | 200000.00 |
| 21 | ಅಂಚೆ ವೆಚ್ಚ | 80000.00 | 72465.00 | 0.00 | 7535.00 |
| 22 | ವಾರ್ಷಿಕ ಮಹಾಸಭಾ ಖರ್ಚು | 1200000.00 | 1455404.00 | 255404.00 | 0.00 |
| 23 | ಪ್ರಚಾರದ ಖರ್ಚು | 300000.00 | 236350.00 | 0.00 | 63650.00 |
| 24 | ಕಟ್ಟಡ & ನೀರಿನ ತೆರಿಗೆ & ಇತರೆ ಖರ್ಚುಗಳು | 200000.00 | 155745.16 | 0.00 | 44254.84 |
| 25 | ವಾರ್ಷಿಕ ನಿರ್ವಹಣಾ ವೆಚ್ಚ | 300000.00 | 240276.00 | 0.00 | 59724.00 |
| 26 | ರಾಷ್ಟ್ರೀಯ ಫೆಡರೇಷನ್ / ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ / ಸೌಹಾರ್ದ ಸಹಕಾರಿ ನಿ., & ಜಿಲ್ಲಾ ಯೂನಿಯನ್ ಸದಸ್ಯತ್ವ ಶುಲ್ಕ | 150000.00 | 130000.00 | 0.00 | 20000.00 |

## 2024-25ನೇ ಸಾಲಿನ ಅಂದಾಜು ಆಯ-ವ್ಯಯದ ಮರುಹೊಂದಾಣಿಕೆ ಪಟ್ಟಿ.

| ಕ್ರ.ಸಂ. | ವಿವರ | ಮಂಜೂರಾದ ಮೊಬಲಗು | ಖರ್ಚಾದ ಮೊಬಲಗು | ಹೆಚ್ಚುವರಿ ಖರ್ಚು | ಉಳಿತಾಯ |
|---|---|---|---|---|---|
| 27 | ಸಾಮಾನ್ಯ ಖರ್ಚು | 500000.00 | 679798.00 | 179798.00 | 0.00 |
| 28 | ಕ್ರೀಡಾ & ಸಾಂಸ್ಕೃತಿಕ ಚಟುವಟಿಕೆಗಳ ಖರ್ಚು | 100000.00 | 0.00 | 0.00 | 100000.00 |
| 29 | ದಾನ / ವಂತಿಗೆ | 150000.00 | 159001.00 | 9001.00 | 0.00 |
| 30 | ಲೆಕ್ಕಪರಿಶೋಧನಾ ಶುಲ್ಕ ಮತ್ತು ಲೆಕ್ಕಪರಿಶೋಧಕರ ಖರ್ಚು | 1000000.00 | 663946.00 | 0.00 | 336054.00 |
| 31 | ರಿಪೇರಿ ಮತ್ತು ನಿರ್ವಹಣೆ | 1600000.00 | 751728.77 | 0.00 | 848271.23 |
| 32 | ಸವಕಳಿ | 7500000.00 | 6453062.53 | 0.00 | 1046937.47 |
| 33 | ಅತಿಥಿ ಸತ್ಕಾರದ ಖರ್ಚು | 600000.00 | 776923.00 | 176923.00 | 0.00 |
| 34 | ಸಿಬ್ಬಂದಿ ಸಮವಸ್ತ್ರ | 120000.00 | 109899.00 | 0.00 | 10101.00 |
| 35 | ಆದಾಯ ತೆರಿಗೆ | 5500000.00 | 6545099.00 | 1045099.00 | 0.00 |
| 36 | ಅಮರ್‌ಟೈಸೇಷನ್ | 1100000.00 | 1038779.00 | 0.00 | 61221.00 |
| 37 | ಕಟ್ಟಡ ಬಾಡಿಗೆ | 60000.00 | 55000.00 | 0.00 | 5000.00 |
| 38 | ಎ.ಟಿ.ಎಂ. ನಿರ್ವಹಣಾ ವೆಚ್ಚ | 400000.00 | 677405.95 | 277405.95 | 0.00 |
| 39 | ಅನುತ್ಪಾದಕ ಆಸ್ತಿಯ ಅವಕಾಶ (ಎನ್.ಪಿ.ಎ) | 7500000.00 | 100000.00 | 0.00 | 7400000.00 |
| 40 | ಜಿ.ಎಸ್.ಟಿ. ಖರ್ಚು, ಬಡ್ಡಿ ಇತರೆ | 0.00 | 687160.00 | 687160.00 | 0.00 |
| 41 | ನ್ಯಾಚ್, ಯು.ಪಿ.ಐ., ಸಿಬಿಲ್ & ಐ.ಎಂ.ಪಿ.ಎಸ್ ಚಾರ್ಜಸ್ | 0.00 | 150804.85 | 150804.85 | 0.00 |
| 42 | ಡೆಫರ್ಡ್ ಟ್ಯಾಕ್ಸ್ | 0.00 | 258771.00 | 258771.00 | 0.00 |
| | ಒಟ್ಟು ಮೊತ್ತ | **177180000.00** | **168485375.41** | **6455569.72** | **15150194.71** |

**ದಿನಾಂಕ : 27-06-2025**

**ಸ್ಥಳ : ಹೊಸದುರ್ಗ**

ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿಯಮಿತ ಇದರ ಪರವಾಗಿ

(ಎನ್. ಮಂಜುನಾಥ)
ಪ್ರಧಾನ ವ್ಯವಸ್ಥಾಪಕರು

# ನಿರ್ದೇಶಕ ಮಂಡಲಿಯ ಸದಸ್ಯರು ಬ್ಯಾಂಕಿನಲ್ಲಿ ಹೊಂದಿರುವ ವ್ಯವಹಾರದ ವಿವರ

| ಕ್ರಮ ಸಂಖ್ಯೆ | ನಿರ್ದೇಶಕರ ಹೆಸರು | ಹುದ್ದೆ | ಹಾಜರಾದ ಸಭೆಗಳು | ನಿರ್ದೇಶಕರ ಠೇವಣಿ | ಪಡೆದ ಸಭಾ ಭತ್ಯೆ | ನಿರ್ದೇಶಕರ ಸಾಲ | ನಿರ್ದೇಶಕರ ಸಂಬಂಧಿ ಸಾಲ | ಒಟ್ಟು ಸಾಲ |
|---|---|---|---|---|---|---|---|---|
| 1 | ಶ್ರೀ. ಹಂಜಿ ಶಿವಸ್ವಾಮಿ | ಅಧ್ಯಕ್ಷರು | 40 | 1009525.76 | 144000.00 | ಇಲ್ಲಾ | ಇಲ್ಲಾ | ಇಲ್ಲಾ |
| 2 | ಶ್ರೀ. ಡಿ. ಆದಿರಾಜಯ್ಯ | ಉಪಾಧ್ಯಕ್ಷರು | 41 | 1681280.92 | 95000.00 | ಇಲ್ಲಾ | ಇಲ್ಲಾ | ಇಲ್ಲಾ |
| 3 | ಶ್ರೀ. ಡಿ.ಎಂ.ಗಂಗಾಧರಗುಪ್ತ | ನಿರ್ದೇಶಕರು | 6 | 32051.40 | 9000.00 | ಇಲ್ಲಾ | ಇಲ್ಲಾ | ಇಲ್ಲಾ |
| 4 | ಶ್ರೀ. ಓ. ನಾಗೇಂದ್ರಯ್ಯ | ನಿರ್ದೇಶಕರು | 15 | 933001.35 | 26500.00 | ಇಲ್ಲಾ | ಇಲ್ಲಾ | ಇಲ್ಲಾ |
| 5 | ಶ್ರೀ. ಎನ್.ಎಸ್.ಓಬಯ್ಯ | ನಿರ್ದೇಶಕರು | 8 | 70795.00 | 22000.00 | ಇಲ್ಲಾ | ಇಲ್ಲಾ | ಇಲ್ಲಾ |
| 6 | ಶ್ರೀ ಟಿ.ಎನ್.ಗುರುಮೂರ್ತಿ | ನಿರ್ದೇಶಕರು | 16 | 562856.10 | 30000.00 | ಇಲ್ಲಾ | ಇಲ್ಲಾ | ಇಲ್ಲಾ |
| 7 | ಶ್ರೀ. ಬಿ.ವಿ.ಕುಶಕುಮಾರ್ | ನಿರ್ದೇಶಕರು | 22 | 340898.85 | 39000.00 | ಇಲ್ಲಾ | ಇಲ್ಲಾ | ಇಲ್ಲಾ |
| 8 | ಶ್ರೀಮತಿ. ವೀಣಾ.ಎಸ್.ರಾವ್ | ನಿರ್ದೇಶಕರು | 6 | 276248.00 | 11000.00 | ಇಲ್ಲಾ | ಇಲ್ಲಾ | ಇಲ್ಲಾ |
| 9 | ಶ್ರೀಮತಿ. ಪಾರ್ವತಮ್ಮ ಟಿ. ಸಿ. | ನಿರ್ದೇಶಕರು | 13 | 1192812.73 | 24500.00 | ಇಲ್ಲಾ | ಇಲ್ಲಾ | ಇಲ್ಲಾ |
| 10 | ಶ್ರೀಮತಿ. ಲೀಲಾಂಬ ಕೆ. | ನಿರ್ದೇಶಕರು | 15 | 2512400.17 | 27500.00 | ಇಲ್ಲಾ | ಇಲ್ಲಾ | ಇಲ್ಲಾ |
| 11 | ಶ್ರೀ ಬಾಹುಬಲಿ ಇ. ಟಿ. | ನಿರ್ದೇಶಕರು | 14 | 635228.00 | 26000.00 | ಇಲ್ಲಾ | ಇಲ್ಲಾ | ಇಲ್ಲಾ |
| 12 | ಶ್ರೀ. ಶ್ರೀನಿವಾಸಯ್ಯ ಬಿ. ಎಸ್. | ನಿರ್ದೇಶಕರು | 16 | 693350.00 | 29000.00 | ಇಲ್ಲಾ | ಇಲ್ಲಾ | ಇಲ್ಲಾ |
| 13 | ಶ್ರೀ ಕೆ ಸಿ ಮಲ್ಲಾ ನಾಯ್ಕ್ | ನಿರ್ದೇಶಕರು | 02 | 18352.00 | 12000.00 | ಇಲ್ಲಾ | ಇಲ್ಲಾ | ಇಲ್ಲಾ |
| 14 | ಶ್ರೀ ಶ್ರೀನಾಥ್.ಟಿ.ಎಸ್ | ನಿರ್ದೇಶಕರು | 02 | 165728.85 | 6000.00 | ಇಲ್ಲಾ | ಇಲ್ಲಾ | ಇಲ್ಲಾ |



# ಬ್ಯಾಂಕ್ ಹಮ್ಮಿಕೊಂಡಿರುವ ಠೇವಣಿ ಮತ್ತು ಸಾಲಗಳ ಯೋಜನೆಗಳ ವಿವರ

## ಉಳಿತಾಯ ಖಾತೆ

ಈ ಠೇವಣಿ ಖಾತೆಯು ವ್ಯಾಪಾರದಾರರಿಗೆ/ ವೃತ್ತಿಪರರಿಗೆ ಉತ್ತಮ ಠೇವಣಿ ಯೋಜನೆಯಾಗಿರುತ್ತದೆ. ಈ ಉಳಿತಾಯ ಖಾತೆಯ ಪ್ರಾರಂಭಿಕ ಠೇವಣಿ ಕನಿಷ್ಠ ರೂ.300-00ಗಳಾಗಿದ್ದು, ಈ ಖಾತೆಯಲ್ಲಿ ದಿನವಹಿ ವ್ಯವಹರಿಸಿ ತೊಡಗಿಸುವ ಮೊಬಲಗಿಗೆ ಶೇ3.% ರಂತೆ ದಿನವಹಿ ಮೊಬಲಗಿಗೆ ಬಡ್ಡಿ ನೀಡಲಾಗುವುದು. ಶಾಲಾ/ಕಾಲೇಜು ವಿದ್ಯಾರ್ಥಿಗಳಿಗಾಗಿ 1. ಸೀತಾ ಬಾಲವಿಕಾಸ ಯೋಜನೆ, 2. ಸೀತಾ ಪ್ರೌಢ ವಿಕಾಸ ಯೋಜನೆ, 3. ಸೀತಾ ಯುವ ವಿಕಾಸ ಯೋಜನೆ ಎಂಬ ಉಳಿತಾಯ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.

## ವಿಶೇಷ ಆವರ್ತಿತ(ಆರ್. ಡಿ.) ಠೇವಣಿ

ಈ ಠೇವಣಿಯು ಮಾಸಿಕ ಉಳಿತಾಯ ಠೇವಣಿ ಯೋಜನೆಯಾಗಿದ್ದು, ಈ ಠೇವಣಿಯಲ್ಲಿ ಪ್ರತಿ ಮಾಸಿಕ ರೂ. 500-00 ಗಳಂತೆ 60 ತಿಂಗಳ ಅವಧಿಯವರೆಗೆ ತೊಡಗಿಸಿಕೊಂಡು ಬಂದಲ್ಲಿ ಅಂತಹ ಠೇವಣಿಗಳಿಗೆ ಶೇ7.00% ರಷ್ಟು ಬಡ್ಡಿ ನೀಡಲಾಗುವುದು ಮತ್ತು ವಿಶೇಷ ಸೌಲಭ್ಯಗಳು ದೊರೆಯುವ ಸಾಧ್ಯತೆಗಳಿರುತ್ತದೆ.

## ವೇದಾ ನಗದು ಪತ್ರ

ಈ ಠೇವಣಿಯು ಬ್ಯಾಂಕಿನ ಠೇವಣಿಗಳಲ್ಲಿ ಹೆಚ್ಚಿನ ಲಾಭದಾಯಕ ಠೇವಣಿ ಯೋಜನೆಯಾಗಿದ್ದು, ಈ ಠೇವಣಿಯಲ್ಲಿ ಹಣ ತೊಡಗಿಸಿದಲ್ಲಿ ಹೆಚ್ಚಿನ ಬಡ್ಡಿಯು ದೊರೆಯುವುದು. ಹಿರಿಯ ನಾಗರೀಕರು ತೊಡಗಿಸುವ ಠೇವಣಿಗಳಿಗೆ ನೀಡುವ ಸಾಮಾನ್ಯ ಬಡ್ಡಿ ದರದೊಂದಿಗೆ ಶೇ. 0.75% ರಷ್ಟು ಹೆಚ್ಚಿನ ಬಡ್ಡಿ ನೀಡುವ ವಿಶೇಷತೆಯನ್ನು ಕಲ್ಪಿಸಲಾಗಿದೆ.

## ನಿತ್ಯನಿಧಿ ಸಾಲ ಯೋಜನೆ

ಬ್ಯಾಂಕಿನಲ್ಲಿ ನಿಕಟ ವ್ಯವಹಾರವನ್ನು ಹೊಂದಿರುವಂತಹ ಸದಸ್ಯರುಗಳಿಗೆ ನಿತ್ಯನಿಧಿ ಅಲ್ಪಾವಧಿ ಸಾಲ ಸೌಲಭ್ಯ ಕಲ್ಪಿಸಲಾಗಿದೆ. ಶೀಘ್ರವಾಗಿ ಸಾಲ ದೊರೆಯುವ ಅನುಕೂಲ ಕಲ್ಪಿಸಲಾಗಿದ್ದು, ಈ ಸಾಲದ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ.

## ಗೃಹ ನಿರ್ಮಾಣ ಸಾಲ

ಬ್ಯಾಂಕಿನ ಸದಸ್ಯರುಗಳಿಗೆ ಅನುಕೂಲ ಕಲ್ಪಿಸಿಕೊಡುವ ದಿಸೆಯಲ್ಲಿ ಮನೆ/ಗೃಹ ಕಟ್ಟಡ ನಿರ್ಮಾಣ ಸಾಲಗಳ ಮೇಲಿನ ಬಡ್ಡಿ ದರಗಳನ್ನು ಪರಿಷ್ಕರಿಸಿ, ಈ ಸಾಲದ ಮೇಲಿನ ಬಡ್ಡಿದರ ಕೇವಲ ಶೇ. 10.00% ರಂತೆ ನಿಗದಿಪಡಿಸಿ ನೀಡಲಾಗುತ್ತಿದೆ. ಈ ಸಾಲ ಮರುಪಾವತಿಸಲು ದೀರ್ಘಾವಧಿ ಕಂತುಗಳ ಸೌಲಭ್ಯ ನೀಡಲಾಗುವುದು. ಈ ಸದಾವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳ ಬಹುದಾಗಿದೆ.

## ಚಿನ್ನಾಭರಣ ಸಾಲ

ಬ್ಯಾಂಕಿನ ಸದಸ್ಯರು/ನಾಮಮಾತ್ರ ಸದಸ್ಯರುಗಳಿಗೆ ಚಿನ್ನಾಭರಣ ಆಧಾರ ಸಾಲ ಸೌಲಭ್ಯವಿದ್ದು, ಈ ಸಾಲದ ಮೇಲೆ ಬಡ್ಡಿದರ ಶೇ.9% ರಂತೆ ನಿಗಧಿಪಡಿಸಿದ್ದು, ಶೀಘ್ರವಾಗಿ ಈ ಸಾಲ ದೊರೆಯುವ ಅನುಕೂಲ ಕಲ್ಪಿಸಲಾಗಿದೆ. ಈ ಸಾಲದ ಸದುಪಯೋಗ ಪಡಿಸಿಕೊಳ್ಳಬಹುದಾಗಿದೆ.

## ಕೃಷಿ ಸಾಲ

ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೋಟ ಗಾರಿಕೆಗಾಗಿ, ರೇಷ್ಮೆ ಬೆಳೆಯಲು, ಹೈನುಗಾರಿಕೆಗಾಗಿ ಜಮೀನು ಅಭಿವೃದ್ಧಿಪಡಿಸಲು, ಸಾಲ ಸೌಲಭ್ಯಗಳನ್ನು ಕಲ್ಪಿಸಿ ಕೊಡಲಾಗಿದೆ. ಕೃಷಿ ಸಾಲಗಳ ಮೇಲಿನ ಬಡ್ಡಿದರ ಶೇ. 13.25% ರಂತೆ ನಿಗದಿಪಡಿಸಿ ನೀಡಲಾಗುತ್ತಿದೆ. ಸಾಲ ಮರುಪಾವತಿಸಲು ದೀರ್ಘಾವಧಿ ಕಂತುಗಳ ಸೌಲಭ್ಯ ನೀಡಲಾಗುವುದು.

**ಸಣ್ಣ ಪುಟ್ಟ ವ್ಯಾಪಾರ / ವ್ಯವಹಾರದಾರರಿಗೆ ಅನುಕೂಲ ಕಲ್ಪಿಸುವ ದಿಸೆಯಲ್ಲಿ ರೂ. 1,00,000/-ಗಳ ಜಾಮೀನು ಆಧಾರ ಸಾಲಕ್ಕೆ ಶೇ. 13.50% ನಿಗದಿಪಡಿಸಿ ಶೀಘ್ರವಾಗಿ ಸಾಲ ನೀಡುತ್ತಿದ್ದು ಇದರ ಸದಾವಕಾಶವನ್ನು ಸದಸ್ಯರು ಪಡೆದುಕೊಳ್ಳಲು ತಿಳಿಸಲಾಗಿದೆ. (ಸೀಮಿತ ಅವಧಿಗೆ ಮಾತ್ರ)**


**ವಿಶೇಷ ರಿಯಾಯಿತಿ : ಬ್ಯಾಂಕಿನ ಮಹಿಳಾ ಸದಸ್ಯರುಗಳಿಗೆ ಬ್ಯಾಂಕಿನ ಎಲ್ಲ ಸಾಲಗಳ ಮೇಲಿನ ಬಡ್ಡಿದರದಲ್ಲಿ ಶೇ0.50% ರಷ್ಟು ಕಡಿಮೆ ಮಾಡಿ ವಿಶೇಷ ರಿಯಾಯಿತಿಯನ್ನು ಕಲ್ಪಿಸಿಕೊಡಲಾಗಿದೆ.**

# ಬ್ಯಾಂಕಿನ ಪ್ರಗತಿ ಪಕ್ಷಿನೋಟ

| ವಿವರಗಳು | 2018-19 | 2019-20 | 2020-21 | 2021-22 | 2022-23 | 2023-24 | 2024-25 |
|---|---|---|---|---|---|---|---|
| ಸದಸ್ಯರು | 1912 | 2016 | 1899 | 2138 | 2371 | 2497 | 2397 |
| ಷೇರು ಬಂಡವಾಳ | 339.89 | 370.43 | 393.35 | 467.83 | 553.49 | 650.74 | 683.38 |
| ಆಪದ್ಧನ ಮತ್ತು ಇತರೆ ನಿಧಿಗಳು | 498.19 | 649.71 | 784.57 | 844.69 | 961.31 | 1522.28 | 1247.90 |
| ಠೇವಣಿಗಳು | 11,047.54 | 12,439.72 | 13,492.06 | 14,452.97 | 16,034.43 | 16,718.44 | 17,072.34 |
| ಸಾಲ ಮತ್ತು ಮುಂಗಡಗಳು | 6,967.39 | 7,418.13 | 8,359.10 | 9,451.66 | 11,161.32 | 11,844.45 | 11,622.29 |
| ದುಡಿಯುವ ಬಂಡವಾಳ | 11,885.60 | 13,459.86 | 14,669.99 | 15,765.50 | 17,549.23 | 18,891.46 | 19,003.62 |
| ನಿವ್ವಳ ಲಾಭ | 50.17 | 82.15 | 79.12 | 101.50 | 146.80 | 154.69 | 158.87 |
| ಲಾಭಾಂಶ | 10% | 0.00% | 10% | 10% | 9% | 10% | 10%* |

* ಪ್ರಸ್ತಾವಿತ

PROGRESS REPORT



# NOTES ON ACCOUNTS OF BALANCE SHEET AS ON 31-03-2025

## NOTES ON ACCOUNTS

| Particulars | As on 31.03.2025 Amount (In Lakhs) | As on 31.03.2024 Amount (In Lakhs) |
|---|---|---|
| Interest Income as a percentage to Working Funds | 9.35% | 9.30% |
| Non-Interest Income as a Percentage to Working Funds | 0.34% | 0.34% |
| Cost of Funds | 6.12% | 6.26% |
| Net Interest Margin | 4.46% | 4.13% |
| Operating Profit as a percentage to working Fund | 1.15% | 0.82% |
| Return on Assets | 9.30% | 9.30% |
| Gross NPA | 2.57% | 6.88% |
| Net NPA | 00.00 | 3.19% |
| BDDR provision Coverage Ratio | 100% | 55.41% |
| CRAR (Capital to Risk Asset Ratio) | 15.11% | 14.06% |
| Working Capital | 190.03Crores | 188.91 Crores |
| Business Per Employee | 10.60 Crores | 10.99 Crores |
| Profit per Employee | 0.06 Crores | 0.06 Crores |
| Payments to Deposit Insurance Premium (DICGC) | 20.09 Lakhs | 19.58 Lakhs |
| Investments in Govt Securities | 36.00 Crores | 37.91 Crores |
| Penalty Imposed by RBI | NIL | NIL |
| Restricted Accounts | NIL | NIL |

## ಸೀತಾರಾಘವ ಬ್ಯಾಂಕಿನ ವೈಶಿಷ್ಟ್ಯತೆಗಳು

- ವರ್ಷದಲ್ಲಿ (ಭಾನುವಾರ ಮತ್ತು ನೆಗೋಷಿಯೆಬಲ್ ಆಕ್ಟನ ರೀತ್ಯಾದ ರಜೆಗಳು ಹೊರತುಪಡಿಸಿ ಉಳಿದೆಲ್ಲ ದಿನಗಳ ಸೇವೆ)
- ಸಂಪೂರ್ಣ ಹವಾನಿಯಂತ್ರಿತ
- ದಿನದ 11 ಗಂಟೆಗಳ ಬ್ಯಾಂಕಿಂಗ್ ಸೌಲಭ್ಯ
- ಸಂಗೀತಮಯ ವಾತಾವರಣ
- ಸಂಪೂರ್ಣ ಗಣಕೀಕೃತ, ಕೋರ್ ಬ್ಯಾಂಕಿಂಗ್
- ಮನೆ ಬಾಗಿಲಿಗೆ ಸೇವೆ
- ಸೇಫ್ ಲಾಕರ್ ಸೌಲಭ್ಯ
- ಇ–ಸ್ಟಾಂಪಿಂಗ್ ಸೌಲಭ್ಯ
- ಆರ್.ಟಿ.ಜಿ.ಎಸ್., ಎನ್.ಇ.ಎಫ್.ಟಿ ಸೌಲಭ್ಯ
- ಎಸ್.ಎಮ್.ಎಸ್ ಸರ್ವಿಸ್
- ಎ.ಟಿ.ಎಂ. ಸೌಲಭ್ಯ
- ಠೇವಣಿ ಮೇಲೆ ಆಕರ್ಷಕ ಬಡ್ಡಿದರಗಳು ಮತ್ತು ತ್ವರಿತಗತಿಯಲ್ಲಿ ಸಾಲ ಸೌಲಭ್ಯ
- **IMPS, Mobile Banking, UPI & NACH**



## ಸದಸ್ಯರುಗಳಿಗೆ ವಿಶೇಷ ಸೂಚನೆ

## ಸೌಹಾರ್ದ ಕಾಯ್ದೆ ಮತ್ತು ಉಪವಿಧಿ (ಬೈಲಾ) ಅನ್ವಯ ಬಳಸಬೇಕಾದ ಕನಿಷ್ಠ ಸೇವೆಗಳು

- ಉಳಿತಾಯ ಖಾತೆಯಲ್ಲಿ ಕನಿಷ್ಠ ತಿಂಗಳಿಗೆ ಎರಡರಂತೆ ಒಂದು ವಿತ್ತೀಯ ವರ್ಷದಲ್ಲಿ ಕನಿಷ್ಠ 24 ವಹಿವಾಟು.
- ಚಾಲ್ತಿ ಖಾತೆಯಲ್ಲಿ ಕನಿಷ್ಠ ತಿಂಗಳಿಗೆ ಎರಡರಂತೆ ಒಂದು ವಿತ್ತೀಯ ವರ್ಷದಲ್ಲಿ ಕನಿಷ್ಠ 24 ವಹಿವಾಟು.
- ಬ್ಯಾಂಕಿನ ಯಾವುದೇ ರೀತಿಯ ಠೇವಣಿ ಯೋಜನೆಯಲ್ಲಿ ಬ್ಯಾಂಕಿಗಾಗಲಿ, ಇತರೆ ಯಾವುದೇ ಸಂಸ್ಥೆಗಾಗಲಿ ಆಧಾರಕ್ಕೊಳಪಡದ ಕನಿಷ್ಠ ರೂ. 5000–00 ಒಂದು ವರ್ಷವಾದರೂ ತೊಡಗಿಸಿರಬೇಕು.
- ಹಿಂದಿನ ವರ್ಷದ ಅವಧಿಯಲ್ಲಿ ಕನಿಷ್ಠ ರೂ. 5,000–00 ಬಡ್ಡಿಯನ್ನು ಕನಿಷ್ಠ ಮೂರು ತಿಂಗಳಿಗಿಂತ ಹೆಚ್ಚು ಬಾಕಿ ಉಳಿಯುವ (ಡ್ಯೂ) ಸಾಲದ ಖಾತೆಗೆ ಪಾವತಿಸಿರಬೇಕು.
- ಹಿಂದಿನ ಎರಡು ವರ್ಷಗಳಲ್ಲಿ ಮೇಲ್ಕಂಡ ನಿಯಮದಂತೆ ಕನಿಷ್ಠ ಒಂದು ನಿಯಮವನ್ನಾದರೂ ಪಾಲಿಸದ ಸದಸ್ಯರು ಮಹಾಸಭೆ ಚುನಾವಣೆಗಳಲ್ಲಿ ಮತ ಚಲಾಯಿಸಲು ಅನರ್ಹರು ಮತ್ತು ಕಾಯ್ದೆಯ ಪ್ರಕರಣ ಇಪ್ಪತ್ತರನ್ವಯ ಕ್ರಮಕ್ಕೆ ಅರ್ಹರಾಗಿರುತ್ತಾರೆ.
- ಸಹಕಾರಿಯ ಐದು ವರ್ಷಗಳ ಪೈಕಿ ಯಾವುದೇ ಎರಡು ಸಾಮಾನ್ಯ ಸಭೆಗಳಿಗೆ (ವಾರ್ಷಿಕ ಮಹಾಸಭೆ) ಹಾಜರಾಗಿಲ್ಲದಿದ್ದರೆ, ಅಂತ ವ್ಯಕ್ತಿಯು ಸದಸ್ಯನಾಗಿ ಮುಂದುವರಿಯಲು ಅರ್ಹನಾಗಿರತಕ್ಕವನಲ್ಲ.
- ಹಿಂದಿನ ಐದು ಸಹಕಾರಿ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಗಳಲ್ಲಿ ಬ್ಯಾಂಕಿನ ಉಪವಿಧಿಗಳಲ್ಲಿ ನಿರ್ಧಿಷ್ಟ ಪಡಿಸಿದಂತೆ ಬ್ಯಾಂಕಿನ ಕನಿಷ್ಠ ಸೇವೆಗಳನ್ನು ಬಳಸಿಕೊಳ್ಳಲು ತಿಳಿಸಲಾಗಿದೆ, ತಪ್ಪಿದ್ದಲ್ಲಿ ಒಂದು ವರ್ಷದವರೆಗೆ ಸಾಮಾನ್ಯ ಸಭೆಯಲ್ಲಿ ಹಾಜರಾಗಲೂ ಮತ್ತು ನಿರ್ದೇಶಕರ ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕನ್ನು ಹೊಂದುರುವುದಲ್ಲ.
- ಸಹಕಾರಿ ಕಾಯಿದೆಯನ್ವಯ 'ದ್ವಿ ಸದಸ್ಯತ್ವಕ್ಕೆ' ಅವಕಾಶವಿರುವುದಿಲ್ಲ.
- ಸಹಕಾರಿ ಸಂಘಗಳ ನಿಬಂಧಕರ ಅನುಮತಿ ಇಲ್ಲದೆ 'ದ್ವಿ ಸದಸ್ಯತ್ವ' ಹೊಂದಿದಲ್ಲಿ ಸಹಕಾರ ಸಂಘ ಮತ್ತು ಬ್ಯಾಂಕುಗಳಲ್ಲಿ ಸದಸ್ಯತ್ವವು ರದ್ದಾಗುವುದು.
- ಬ್ಯಾಂಕ್ ನಡೆಸುತ್ತಿರುವಂತಹ ಕಾರ್ಯವನ್ನು ಯಾವುದೇ ವ್ಯಕ್ತಿಗಳು ನಡೆಸಿದಲ್ಲಿ ಅಂತಹ ವ್ಯಕ್ತಿಗಳು ಸದಸ್ಯರಾಗಿ ಮುಂದುವರಿಯಲು ಅವಕಾಶವಿರುವುದಿಲ್ಲ.
- ನಿಮ್ಮ ಹೆಸರಿನಲ್ಲಿರುವ ಬ್ಯಾಂಕ್‌ನ ಷೇರು, ಠೇವಣಿಗಳ ಹಣಕ್ಕೆ ವಾರಸುದಾರರ/ನಾಮಿನಿದಾರರನ್ನು ಸೂಚಿಸದಿದ್ದಲ್ಲಿ ಕೂಡಲೇ ನಾಮಿನಿದಾರರನ್ನು ನೋಂದಾಯಿಸಲು ಅರ್ಜಿ ಸಲ್ಲಿಸಿಕೊಳ್ಳುವುದು.
- ಬ್ಯಾಂಕಿನ ಬೈಲಾದನ್ವಯ ಸದಸ್ಯರುಗಳಿಗೆ 'ಗುರುತಿನ ಚೀಟಿಯು' ಕಡ್ಡಾಯವಾಗಿರುವುದರಿಂದ ಪ್ರತಿಯೊಬ್ಬ ಸದಸ್ಯರು ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು, ಸದಸ್ಯರು ತಮ್ಮ ಭಾವಚಿತ್ರವನ್ನು ಬ್ಯಾಂಕಿನಲ್ಲಿ ನೀಡಿ ಗುರುತಿನ ಚೀಟಿ ಪಡೆದುಕೊಳ್ಳಲು ಕೋರುತ್ತೇವೆ.




ಬ್ಯಾಂಕಿನ 26ನೇ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷರು ಹಾಗೂ ನಿರ್ದೇಶಕ ಮಂಡಲಿ ಸದಸ್ಯರುಗಳು ಉದ್ಘಾಟನೆ ಮಾಡುತ್ತಿರುವುದು.




ಬ್ಯಾಂಕಿನ 26ನೇ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷರು ವಾರ್ಷಿಕ ವರದಿಯನ್ನು ಮಂಡಿಸುತ್ತಿರುವುದು.













ಬ್ಯಾಂಕಿನ 26ನೇ ವಾರ್ಷಿಕ ಮಹಾಸಭೆಯಲ್ಲಿ ಉತ್ತಮ ಗ್ರಾಹಕರಿಗೆ ಸನ್ಮಾನ ಮಾಡುತ್ತಿರುವುದು.
















ಬ್ಯಾಂಕಿನ ಎಲ್ಲಾ ಶಾಖೆಗಳಲ್ಲಿ ಗ್ರಾಹಕರ ಸಭೆ ನಡೆಸುತ್ತಿರುವುದು







**ಶ್ರೀ ಶಿರಡಿ ಸಾಯಿಬಾಬಾ ಮಂದಿರ, ಹೊಸದುರ್ಗ**





**ಶಾಖೆ : ಕಡೂರು**
ಸಾಯಿಚೇತನ, ಕೆ.ಬಿ. ಬಡಾವಣೆ, ಕಡೂರು - 577 548.
ಮೊ. 7022276834, 7022276832,
ದೂರವಾಣಿ : 08267-222066,
E-mail : kadur@sitabank.in





**ಶಾಖೆ : ಭದ್ರಾವತಿ**
ಸಾಯಿಜ್ಯೋತಿ, ಸರಕಾರಿ ಆಸ್ಪತ್ರೆಯ ಮುಂಭಾಗ,
ಭೂತನಗುಡಿ ಬಡಾವಣೆ, ಭದ್ರಾವತಿ - 577 301.
ದೂರವಾಣಿ : 08282-275656,
ಮೊ. 9148197581, 7022276830
E-mail : bdvt@sitabank.in

**ಶಾಖೆ : ಬೆಂಗಳೂರು**
ಸಾಯಿಕೃಪಾ, ನಂ. 27,
ಡಾ|| ರಾಜಕುಮಾರ್ ರೋಡ್, 6ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು - 560 010.
ದೂರವಾಣಿ : 080-23144999
ಮೊ. 70222 76825, 70222 76826
E-mail : blr@sitabank.in

ತೆರೆದ-ಅಂಚೆ

**ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ.**

**SRI SEETHARAGHAVA SOUHARDA SAHAKARA BANK NIYAMITHA**

ಪ್ರಧಾನ ಕಛೇರಿ : ಬಸ್ ನಿಲ್ದಾಣದ ರಸ್ತೆ, ಹೊಸದುರ್ಗ-577 527. ಚಿತ್ರದುರ್ಗ ಜಿಲ್ಲೆ
ದೂ : 08199-230447, ಫ್ಯಾಕ್ಸ್ : 08199-231405,
Mobile : 70222 76822/70222 76824, E-mail : sita_bank1@rediffmail.com, headoffice@sitabank.in
Web : www.seethabank.in